Rajgopalan 011 24330281 C418 Defence

ಪ್ರಜಾವಾಣಿ
ವಾಣಿಜ್ಯ
ಉದ್ಯಮ | ಕೃಷಿ | ತಂತ್ರಜ್ಞಾನ | ಸಂಪರ್ಕ 01-09-2004

ಕೊಲಂಬೊದಲ್ಲಿನ ಪ್ರಮುಖ ಮಳಿಗೆಯಲ್ಲಿ ಪರಿಚಾರಿಕೆಯೊಬ್ಬಳು ದುಬಾರಿ ಚಹದ ಡಬ್ಬಿಗಳನ್ನು ಜೋಡಿಸುತ್ತಿದ್ದಾಳೆ. ಈ ಉತ್ತೇಜಕ ಪೇಯದ ಬೆಲೆ ಪ್ರತಿ ಕೆ.ಜಿಗೆ ಅತ್ಯುತ್ತಮ ದರ್ಜೆಯ 'ಸಿಲೋನ್ ಟೀ'ಗಿಂತ 750 ಪಟ್ಟು ಹೆಚ್ಚಿಗಿದೆಯಂತೆ. ಚಹ ತಯಾರಕ ಸಂಸ್ಥೆ ಮಲಿಂಗಾ ಹೆರ್ಮನ್ ಗುಣರತ್ನೆ, ಶತಮಾನಗಳಷ್ಟು ಹಳೆಯದಾದ ಚೀನದ ಸಾಂಪ್ರದಾಯಿಕ ವಿಧಾನದಲ್ಲಿ ಈ ದುಬಾರಿ ಚಿನ್ನದ ಬೆಳೆಯ ಚಹ ತಯಾರಿಸುತ್ತಿದೆ.



ಚಿಕ್ಕತಿಂಡಿ

ಬೀರ್ ಭೂಪನಿಗೆ ಸಿಕ್ಕ ನ್ಯಾಯ!



ಜರ್ಮನಿಯ ಪಬ್ ಪರಿಚಾರಕನೊಬ್ಬ ದಿನಕ್ಕೆ 100 ಬಾಟಲಿ ಬೀರ್ ಕುಡಿಯುವ ಆರೋಪದ ಮೇಲೆ ಕೆಲಸ ಕಳೆದುಕೊಂಡ. ತನಗೆ ಅನ್ಯಾಯವಾಗಿದೆ. ಸಕಾರಣ ಇಲ್ಲದೇ ಕೆಲಸದಿಂದ ತೆಗೆದುಹಾಕಲಾಗಿದೆ ಎಂದು 'ಬೀರೇಶ್ವರ' ಕೋರ್ಟ್ ಕಟ್ಟೆ ಏರಿದ. ಜಾಸ್ತಿ ಕುಡಿಯಬೇಡ ಎಂದು ಮಾಲೀಕ ಎಚ್ಚರಿಸಿದ್ದು ಹೌದು ಎಂದು ಒಪ್ಪಿಕೊಂಡಿದ್ದಾನೆ. ಅಲ್ಲಿ ಆತನಿಗೆ ನ್ಯಾಯ ಸಿಕ್ಕಿದೆ. 8 ವರ್ಷಗಳ ದುಡಿತಕ್ಕೆ ಸಿಕ್ಕ ಪ್ರತಿಫಲ ಇದಾಗಿರಬೇಕು. ಒಬ್ಬ ವ್ಯಕ್ತಿ ದಿನಕ್ಕೆ 100 ಬಾಟಲಿ ಬೀರ್ ಕುಡಿಯಬಹುದೇ?

ಜಾರದ ಟಾವೆಲ್



ಜಾಣ, ಜಾಣೆಯರು ಸ್ನಾನ ಮಾಡುವಾಗ, ತಾರೆಯರು 'ಸ್ನಾನದ ದೃಶ್ಯ'ಗಳಲ್ಲಿ ನಟಿಸುವಾಗ ಮೈಗೆ ಸುತ್ತಿಕೊಂಡಿದ್ದ ಟಾವೆಲ್ ಆಕಸ್ಮಿಕವಾಗಿ ಜಾರಿ ಸುದ್ದಿಯಾಗುವ, ಮುಜುಗರದ ಸನ್ನಿವೇಶ ಎದುರಾಗುತ್ತಲೇ ಇರುತ್ತದೆ. ಈಗ ಅಂತಹ ಕ್ಷಣಗಳಿಗ ಕೊನೆಯಾಗಲಿದೆ. ಇಂಗ್ಲೆಂಡ್‌ನ ಮೈಕಾಂತಿ ವೃದ್ಧಿಸುವ ಉತ್ಪನ್ನ ತಯಾರಿಕಾ ಸಂಸ್ಥೆಯೊಂದು ಮೈಗೆ ಬಿಗಿಯಾಗಿ ಅಂಟಿಕೊಳ್ಳುವ, ಜಾರದ ಟಾವೆಲ್ ತಯಾರಿಸಿದೆ. ಈ ಟಾವೆಲ್ ಸುತ್ತಿಕೊಂಡು ಕೆಲಸ ಚಟುವಟಿಕೆಗಳನ್ನೆಲ್ಲ ನಿಶ್ಚಿಂತೆಯಿಂದ ಮಾಡಬಹುದಂತೆ. ಹಲ್ಲುಜ್ಜುವಾಗ, ತಲೆ ಬಾಚಿಕೊಳ್ಳುವಾಗ, ಸುವಾಸನೆ ಲೇಪಿಸಿಕೊಳ್ಳುವಾಗ ಈ ಟಾವೆಲ್ ಜಾರದು ಎಂದು ಸಂಸ್ಥೆ ಹೇಳಿಕೊಂಡಿದೆ.


ತಾನಿಷ್ಕದ 'ಆರ್ಕಾ' ಸಂಗ್ರಹ

ಚಿನ್ನಾಭರಣ ತಯಾರಿಕಾ ಸಂಸ್ಥೆ ತಾನಿಷ್ಕ, ಸಾಂಪ್ರದಾಯಿಕ ಮಹಿಳೆಯರಿಗಾಗಿ ಶುದ್ಧ 22 ಕ್ಯಾರೆಟ್‌ನಲ್ಲಿ ಸಿದ್ಧಪಡಿಸಿರುವ ಹೊಸ ವಿನ್ಯಾಸದ 'ಆರ್ಕಾ' ಸಂಗ್ರಹ ಹೊರ ತಂದಿದೆ.



ಸೂರ್ಯನ ಪ್ರಕಾಶ, ಚಲನೆ, ಸಾಮರ್ಥ್ಯ, ಕಾಲದ ಚಕ್ರ ಕಲ್ಪನೆಯನ್ನು ಈ ಆಭರಣಗಳು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಸಾಂಪ್ರದಾಯಿಕ ಒನ್ನೆಲೆ ಮತ್ತು ಆಧುನಿಕ ಸ್ವಭಾವದವರಿಗಾಗಿ ಈ ಆಭರಣಗಳು ಒಪ್ಪಿಗೆ ಆಗುತ್ತವೆ ಎಂದು ಸಂಸ್ಥೆ ಹೇಳಿದೆ.


ಕಂಪ್ಯೂಟರ್: ಅಂದು - ಇಂದು



ಇದು ಅಂಗೈ ಅಗಲದ ಕಂಪ್ಯೂಟರ್ / ಸಿಂಪ್ಯೂಟರ್‌ಗಳ ಕಾಲ. ಆದರೆ ಆಸ್ಟ್ರೇಲಿಯಾದಲ್ಲಿ 1949 ರಲ್ಲಿ ರೂಪಿಸಲಾಗಿದ್ದ ಮೊಟ್ಟ ಮೊದಲ ಕಂಪ್ಯೂಟರ್ (ಸ್ಸಿ ರ್‍ಯಾಕ್) ಅನ್ನು ಮೆಲ್ಬೋರ್ನ್‌ನ ವಿಕ್ಟೋರಿಯಾ ವಸ್ತುಸಂಗ್ರಹಾಲಯದಲ್ಲಿ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ. ವಸ್ತುಸಂಗ್ರಹಾಲಯದ ವ್ಯವಸ್ಥಾಪಕ ಕಾರೊಲೈನ್ ಕಾರ್ಟರ್ ಆ ಕಂಪ್ಯೂಟರ್‌ನ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ಪುಸ್ತಕದಲ್ಲಿನ ವಿವರಗಳನ್ನು ಓದುತ್ತಿದ್ದಾರೆ. ಇದು ಎರಡು ಟನ್‌ಗಳಷ್ಟು ಭಾರ. 40 ಚದರ ಮೀಟರ್‌ಗಳಷ್ಟು ಸ್ಥಳಾವಕಾಶ ಆಕ್ರಮಿಸಿದೆ. ಸದ್ಯದ ಲ್ಯಾಪ್‌ಟಾಪ್‌ಗಳು 'ಸ್ಸಿ ರ್‍ಯಾಕ್'ಗಿಂತ ಒಂದು ಸಾವಿರ ಪಟ್ಟು ಹಗುರವಾಗಿದ್ದು, 3000 ಪಟ್ಟು ಕಡಿಮೆ ವಿದ್ಯುತ್ ಬಳಸುತ್ತ, 20 ಲಕ್ಷ ಪಟ್ಟು ತ್ವರಿತವಾಗಿ ಕಾರ್ಯ ನಿರ್ವಹಿಸುತ್ತವೆ. ಇವುಗಳ ಸ್ಮರಣ ಸಾಮರ್ಥ್ಯ 3 ಲಕ್ಷ ಪಟ್ಟು ಹೆಚ್ಚಿದೆ!

ಭಾರತದ ಕೈಗಾರಿಕಾ ವೃದ್ಧಿ

ಪ್ರಸಕ್ತ ಸಾಲಿನ ಏಪ್ರಿಲ್ - ಜೂನ್ ತಿಂಗಳ ಅವಧಿಯಲ್ಲಿನ ದೇಶದ ಕೈಗಾರಿಕಾ ರಂಗದ ಬೆಳವಣಿಗೆಯನ್ನು ಕಳೆದ ವರ್ಷದ (2003) ಇದೇ ಅವಧಿಗೆ ಹೋಲಿಸಿ ಕೊಡಲಾಗಿದೆ.



ಬಿದಿರಿನ ಛಾವಣಿ, ಸೆಣಬಿನ ಬೆಡ್‌ರೂಮ್

ಇಲ್ಲಿ ಬಿದಿರಿನ ಚಾಪೆಯ ಛಾವಣಿ ಸಿದ್ಧವಾಗುತ್ತದೆ; ಬಾಳೆಯ ನಾರಿನ ಹಲಗೆ ತಯಾರಾಗುತ್ತದೆ. ತೆಂಗಿನ ನಾರಿನ ಹಗ್ಗದ ಸರಳುಗಳು ತಯಾರಾಗುತ್ತವೆ. ಇದು ಭಾರತದ ಮೊಟ್ಟಮೊದಲ ಕಾಂಪೊಸಿಟ್ ಟೆಕ್ನಾಲಜಿ ಪಾರ್ಕ್‌ನ ವಿಶೇಷಗಳು. ಪಟ್ಟಣಗಳಲ್ಲಿ ಉದ್ಯೋಗಾವಕಾಶ ಹೆಚ್ಚಿಸಿ ರೈತರಿಗೂ ಆದಾಯ ಹೆಚ್ಚಿಸುವ ಯೋಜನೆ ಇದು.

ಚಿತ್ರ-ಲೇಖನ: ನಾಗೇಶ ಹೆಗಡೆ

ನಾವು ಕುತೂಹಲದಿಂದ ಹೊಸ ಬಗೆಯ 'ಹಗ್ಗದ ಜಾದೂ' ನೋಡುತ್ತಿದ್ದೆವು.

ಎರಡು ಮಾರುದ್ದದ ಲೇಥ್ ಮಶಿನ್‌ನಂಥ ಯಂತ್ರದೊಳಗೆ ತೆಂಗಿನ ನಾರಿನ ಕಿರುಬೆರಳು ಗಾತ್ರದ ಹಗ್ಗವನ್ನು ತೂರಿಸಲಾಗಿತ್ತು. ಮತ್ತೊಂದು ಬದಿಗೆ ಆ ಯಂತ್ರದ ಮೂತಿಯಿಂದ ಹಸಿ ಕೋಡುಬಳೆಯ ಹಾಗೆ ತೋರುಬೆರಳು ಗಾತ್ರದ ಬೆಳ್ಳನ್ನ ಕೋಲು ಹೊರಬರತೊಡಗಿತು.


ಡಾ. ಗೋಪಾಲನ್ ಇಕ್ಕಳದಿಂದ ಆ ಕೋಲನ್ನು ಕತ್ತರಿಸಿ, ಕೋಲುದ್ದದ ತುಂಡನ್ನು ನಮ್ಮೆದುರು ಹಿಡಿದರು. 'ಇದು ಸುಲಭಕ್ಕೆ ಮುರಿಯೋದಿಲ್ಲ ನೋಡಿ' ಎಂದು ಅದನ್ನು ಬಿಲ್ಲಿನಂತೆ ಬಾಗಿಸಿದರು. ಬಟ್ಟೆಯಂತೆ ಹಿಂಡಿದರು. 'ಇದನ್ನು ಹುಳು ಕಡಿಯುವುದಿಲ್ಲ, ಇದಕ್ಕೆ ತುಕ್ಕು ಹಿಡಿಯುವುದಿಲ್ಲ. ಯಾರೂ ಕದ್ದು ಸಾಗಿಸುವಷ್ಟು ಬೆಲೆಯುಳ್ಳದ್ದೂ ಅಲ್ಲ, ನೋಡಿ' ಎನ್ನುತ್ತ, ಆ ಕೋಲಿನ ಹೊಟ್ಟೆ ಸೀಳಿ ತೋರಿಸಿದರು. ಅದರ ಟೊಳ್ಳಿನುದ್ದಕ್ಕೂ ನಾರಿನ ಹಗ್ಗವಿತ್ತು.

ನಾವು ಆ ಯಂತ್ರದ ಕಡೆಗೆ ನೋಡಿದೆವು. ಅದರ ಹಿಂಭಾಗದಿಂದ ನಾರಿನ ಹಗ್ಗ ಒಳಕ್ಕೆ ಹೋಗುತ್ತಲೇ ಇತ್ತು. ಯಂತ್ರದ ಮೂತಿಯಿಂದ ಬಿಳಿ ಕೋಲು ಬರುತ್ತಲೇ ಇತ್ತು.

'ರೈತರಿಗೆ ಇಂಥ ಕೋಲುಗಳು ನೂರಾರು ಬೇಕಾಗುತ್ತವೆ. ಟೊಮ್ಯಾಟೊ, ಬದನೆ ಗಿಡಗಳಿಗೆ ಆಧಾರ ಕೊಡಲಿಕ್ಕೆ. ಮಿಡಿಸೌತೆ ಬಳ್ಳಿಯನ್ನು ನೇರ ಬೆಳೆಸಲಿಕ್ಕೆ ಇವು ಬೇಕು. ಈ ಯಂತ್ರಕ್ಕೆ ದೊಡ್ಡ ಹಗ್ಗ ತೂರಿಸಿದರೆ ಕಂಬ, ಗೂಟಗಳೂ ಹೊರಬರುತ್ತವೆ' ಎಂದರು ಡಾ. ಆರ್. ಗೋಪಾಲನ್.

ಅವರು ರೈತನ ಹೊಲದ ಕಚ್ಚಾವಸ್ತುವನ್ನೇ (ತೆಂಗಿನ ನಾರನ್ನೇ) ತರಿಸಿ, ರೈತನ ಬಳಕೆಯ ಹೊಸ ವಸ್ತುವನ್ನು ತಯಾರಿಸಿದ್ದರು.

ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪ್ರೊಫೆಸರ್ ಡಾ. ಆರ್. ಗೋಪಾಲನ್ ಇಂಥ ಅನೇಕ ಜನೋಪಯೋಗಿ ವಸ್ತುಗಳನ್ನು ರೂಪಿಸುತ್ತಿದ್ದಾರೆ. ಪೆಟ್ರೋಲಿಯಂ ಕಚ್ಚಾವಸ್ತುವಿನಿಂದ ತಯಾರಾಗುವ ಪ್ಲಾಸ್ಟಿಕ್‌ನಂಥ ಜಿಗುಟು ದ್ರವ್ಯವನ್ನು ಕೃಷಿ ಕಚ್ಚಾವಸ್ತುವಿನ ಜತೆ ಸೇರಿಸಿ 'ಕಂಪೊಸಿಟ್' (ಸಂಯುಕ್ತ) ಸಾಮಗ್ರಿಗಳನ್ನು ಉತ್ಪಾದಿಸುತ್ತಾರೆ.



ಡಾ. ಆರ್.ಗೋಪಾಲ್‌ನ

ಬೆಂಗಳೂರಿನ ಅಂಚಿನ ಕೆಂಗೇರಿಯ ಪಕ್ಕದಲ್ಲಿ ಇದೀಗ ತಲೆ ಎತ್ತಿದ 'ಕಂಪೊಸಿಟ್ ಟೆಕ್ನಾಲಜಿ ಪಾರ್ಕ್'ನಲ್ಲಿ (ಸಿಟಿಪಿ) ಇಂಥ ಸಾಮಗ್ರಿಗಳ ಒಂದು ಶಾಶ್ವತ ಪ್ರದರ್ಶನದಲ್ಲಿ ನಾವಿದ್ದೆವು. ಇಲ್ಲಿ ಎತ್ತ ನೋಡಿದರೂ ನಮಗೆ ಪರಿಚಿತ ವಸ್ತುಗಳೇ ಕಾಣುತ್ತವೆ. ಬಾಗಿಲು, ಕಿಟಕಿ, ಹೆಂಚು, ಛಾವಣಿ ಹೊದಿಕೆ, ಲ್ಯಾಟ್ರಿನ್ ಸೀಟು, ಕೊಳವೆ, ಬಕೆಟು, ಕಪಾಟಿನ ಚೌಕಟ್ಟು, ಕಿಟಕಿ ಸರಳು... ಹೀಗೆ 300ಕ್ಕೂ ಹೆಚ್ಚು. ಆದರೆ ಯಾವುದೂ ನಮಗೆ ಪರಿಚಿತವಿರುವ ಕಟ್ಟಿಗೆ, ಲೋಹ ಅಥವಾ ಸಿಮೆಂಟ್‌ನಿಂದ ನಿರ್ಮಿಸಿದ್ದಲ್ಲ.

'ಇವೆಲ್ಲ ಕಾಂಪೊಸಿಟ್ ಮಟೀರಿಯಲ್ಸ್' ಎನ್ನುತ್ತ ಡಾ. ಗೋಪಾಲನ್ ಕಿಟಕಿಯ ಆಚೆ ಹೂದೋಟದ ದೀಪದ ಕಂಬದತ್ತ ಕೈ ತೋರಿಸಿ, 'ಅಲ್ಲಿ ನೋಡಿ. ಅದೂ ಕಾಂಪೊಸಿಟ್' ಎನ್ನುತ್ತಾರೆ. ಬಿಸಿಲು, ಮಳೆ, ಚಳಿಗೆ ತುಕ್ಕು ಹಿಡಿಯದೆ, ಗೆದ್ದಲು ಹಿಡಿಸಿಕೊಳ್ಳದೆ, ತುಸುವೂ ಭಗ್ನವಾಗದೆ ಆ ಲಾಂದ್ರಕಂಬ ಹೂ ಪಾತಿಯ ನಡುವೆ ನಿಂತಿತ್ತು. ಅದರಾಚೆ ಬಿದಿರಿನ ಚಾಪೆಯ ಗೋಡೆ ಛಾವಣಿಗಳ ಕೆಲವು ಮಾದರಿ ಮನೆಗಳನ್ನೂ ನಿರ್ಮಿತವಾಗಿದ್ದವು.

ಎಲ್ಲಕ್ಕಿಂತ ಆಕರ್ಷಕವಾಗಿ ಕಂಡಿದ್ದೆಂದರೆ, ಬಿದಿರಿನ ಚಾಪೆಯ ಛಾವಣಿ ಹೊದಿಕೆಗಳು, ಬಾಗಿಲುಗಳು ಹಾಗೂ ಹಲಗೆಗಳು. ಚಾಪೆ ನೇಯ್ದು ಅದರ ಎರಡೂ ಮಗ್ಗಲಿಗೆ ಪಾರದರ್ಶಕ ಕಾಂಪೊಸಿಟ್ ಹೊದಿಕೆ ಹಾಕಲಾಗಿದೆ. ನೀರಲ್ಲಿ ತೋಯುವುದಿಲ್ಲ; ಒಡೆಯುವುದಿಲ್ಲ. ನಾರು ಕಿತ್ತು ಬರುವುದಿಲ್ಲ. ಕಲ್ನಾರಿನ ಶೀಟ್‌ಗಳ ಬದಲು ಛಾವಣಿಯ ಹೊದಿಕೆಯಾಗಿ ಇದನ್ನೇ ಬಳಸಬಹುದು.

'ದುಬಾರಿ ಅಲ್ಲವೆ?' ನಾವು ಕೇಳುತ್ತೇವೆ.

'ಈಗ ಪ್ರಾಯೋಗಿಕವಾಗಿ ಮಾಡಿದ್ದರಿಂದ ತುಸು ದುಬಾರಿ ಹೌದು. ದೊಡ್ಡ ಪ್ರಮಾಣದಲ್ಲಿ ಪ್ರತಿ ಜಿಲ್ಲೆಯಲ್ಲೂ ಇದು ತಯಾರಾದರೆ ಬೆಲೆ ಇಳಿಯುತ್ತದೆ. ಲೋಹದ ಅಥವಾ ಸಿಮೆಂಟಿನ ತಗಡುಗಳಿಗಿಂತ ಇವು ಎಷ್ಟೆಲ್ಲ ವಿಧದಲ್ಲಿ ಅನುಕೂಲಕರ. ಅದಕ್ಕಿಂತ ಮುಖ್ಯವಾಗಿ ನಮ್ಮ ರೈತರ ಕಚ್ಚಾ ಪದಾರ್ಥಗಳಿಗೆ ಬೆಲೆ ಡಿಮಾಂಡ್ ಬರುತ್ತದಲ್ರೀ' ಎನ್ನುತ್ತಾರೆ, ಗೋಪಾಲನ್. 'ನಿಮ್ಮ ಗ್ರಾಮದ ಪ್ರಜೆಗೆ ಹಣ ಸಿಗುತ್ತದೆ; ನಮ್ಮ ಪಟ್ಟಣದ ಚಿಕ್ಕ ಉದ್ಯಮಿಯ ಮೂಲಕ ಎಷ್ಟೆಲ್ಲ ಜನರಿಗೆ ಉದ್ಯೋಗ ಸಿಗುತ್ತದೆ.'

'ಆದರೆ ಬಿದಿರು ಎಲ್ಲಿದೆ..?'

ನಮ್ಮ ಪ್ರಶ್ನೆಗೆ ಇವರಿಗೆ ತುಸು ಸಿಟ್ಟೇ ಬರುತ್ತದೆ. 'ಬೇಡಿಕೆ ಇದ್ದರೆ ಎಲ್ಲ ಬಂಜರು ನೆಲದಲ್ಲೂ ಬಿದಿರು ಬೆಳೆಸಬಹುದು. ಬಿದಿರು ಒಂದೇ ಅಲ್ಲ, ಕಬ್ಬಿನ ಸಿಪ್ಪೆ, ಅಡಿಕೆ ಸಿಪ್ಪೆ, ತೆಂಗಿನ ನಾರು, ಸೆಣಬು, ಹತ್ತಿ ಕಡ್ಡಿ, ಬಾಳೆಯ ನಾರು.. ಹೀಗೆ ಎಲ್ಲ ಬಗೆಯ ಕಚ್ಚಾ ವಸ್ತುಗಳಿಂದಲೂ ಹೊಸ, ಆಕರ್ಷಕ ಸಾಮಗ್ರಿ ತಯಾರಿಸಬಹುದು' ಎಂದು ವಿವರಿಸುತ್ತಾರೆ.

ನಾವು ಅಲ್ಲಿದ್ದಾಗ 'ರಾಜೀವ್ ಗಾಂಧಿ ಗ್ರಾಮೀಣ ಗೃಹನಿರ್ಮಾಣ ಮಂಡಲಿ'ಯ ನಿರ್ದೇಶಕ ವೀರಭದ್ರಯ್ಯ ಬಂದಿದ್ದರು. ಅವರು ನಿರ್ಮಿಸಲಿರುವ ಸಾವಿರಾರು ಮನೆಗಳಿಗೆ ಬಾಗಿಲು ಕಿಟಕಿ ಬೇಕಿತ್ತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಬಾಡಿ ಕಟ್ಟಲಿಕ್ಕೆ ಈ ಕಾಂಪೊಸಿಟ್ ಯೋಗ್ಯವೇ ಎಂದು ಕೇಳಲು ಮುಖ್ಯ ಎಂಜಿನಿಯರ್ ಮುಕ್ಕಣ್ಣ ಬಂದಿದ್ದರು.

'ನಾವು ಇದೇ ವಸ್ತುವಿನಿಂದ ಎಲ್‌ಸಿಎ ಹಗುರ ವಿಮಾನ ತಯಾರಿಸಿದ್ದೇವೆ. ಬೇರೆ ದೇಶದಲ್ಲಿ ಅಂಥ ವಿಮಾನದ 19 ಟನ್ ಇರುತ್ತದೆ. ನಮ್ಮ ವಿಮಾನದ ತೂಕ ಕೇವಲ 9 ಟನ್' ಎನ್ನುತ್ತ ಗೋಪಾಲನ್ ಬಸ್ ಬಾಡಿಯ ವಿವರಗಳನ್ನು ಕೇಳುತ್ತಿದ್ದರು. ಆರ್. ವಿ. ಕಾಲೇಜಿಗೆ ಬರುವ ಮೊದಲು ತಾನು ವಿಮಾನ ವಿನ್ಯಾಸ ತಜ್ಞನಾಗಿ ಡಾ. ಅಬ್ದುಲ್ ಕಲಾಂ ತಂಡದಲ್ಲಿ ಇದ್ದೆ ಎಂದು ವಿವರಿಸುತ್ತಿದ್ದರು.

'ಫೈಬರ್ ಗ್ಲಾಸ್' ಹೆಸರಿನ ನಾರುಗಾಜಿನ ತಗಡುಗಳು ನಮಗೆ ಸಾಕಷ್ಟು ಪರಿಚಿತ. ನಮ್ಮ ಹೆಲ್ಮೆಟ್, ಸ್ಕೂಟರ್ ಬಾಡಿಗಳಲ್ಲಿ ಅದೇ ಇದೆ. ರೂರ್ಕಿಯಲ್ಲಿ ಚರಂಡಿ ಮುಚ್ಚಳಗಳೂ ಅದರದ್ದೇ. ಈಗಿನ ಕಾಂಪೊಸಿಟ್ ವಸ್ತುಗಳು ಫೈಬರ್ ಗ್ಲಾಸ್‌ನ ಸುಧಾರಿತ ರೂಪಗಳು. ಇತರ ದೇಶಗಳಲ್ಲಿ ಸುಮಾರು 40 ಸಾವಿರ ಬಗೆಯ ಜನೋಪಯೋಗಿ ವಸ್ತುಗಳು ಇದರಿಂದ ತಯಾರಾಗುತ್ತಿವೆ. ನಮ್ಮದು ಇದೀಗ ಆರಂಭದ ಹೆಜ್ಜೆ ಅಷ್ಟೆ.

'ಇಂಡಿಯನ್ ಪ್ಲೈವುಡ್ ರಿಸರ್ಚ್' ಸಂಸ್ಥೆಯವರೂ ಬಿದಿರಿನಿಂದ ಛಾವಣಿ ಹಲಗೆ ತಯಾರಿಸುತ್ತಿದ್ದಾರೆ. 'ಆದರೆ ಅವರು ಅರಣ್ಯ ಉತ್ಪನ್ನಗಳ ತಜ್ಞರೇ ಹೊರತೂ, ಸಂಯುಕ್ತ ವಸ್ತುಗಳ ತಜ್ಞರಲ್ಲ' ಎನ್ನುವ ಡಾ. ಗೋಪಾಲನ್, ತಮ್ಮ TIFAC ಸಂಸ್ಥೆ ಈ ದಿಶೆಯಲ್ಲಿ ತುಂಬಾ ಮುಂದೆ ಸಾಗಿದೆ ಎನ್ನುತ್ತಾರೆ. ಈಗಾಗಲೇ ದೇಶದ 45ಕ್ಕೂ ಹೆಚ್ಚು ಉದ್ಯಮಿಗಳು ಈ ತಂತ್ರಜ್ಞಾನ ಆಧರಿಸಿದ ಉದ್ಯಮ ಆರಂಭಿಸಿದ್ದಾರಂತೆ.

ಈ ತಂತ್ರಜ್ಞಾನದ ಪ್ರಾತ್ಯಕ್ಷಿಕೆ, ಹಾಗೂ ಹೊಸ ವಸ್ತುಗಳ ಪ್ರದರ್ಶನಕ್ಕೆಂದೇ ಕೆಂಗೇರಿಯ ಬಳಿ ಎರಡೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ 'ಸಿಟಿ ಪಾರ್ಕ್' ಸಿದ್ಧವಾಗಿದೆ. ಬರುವ ಅಕ್ಟೋಬರ್‌ನಲ್ಲಿ ರಾಷ್ಟ್ರಪತಿ ಕಲಾಂ ಅದನ್ನು ವಿಧ್ಯುಕ್ತ ಉದ್ಘಾಟನೆ ಮಾಡುವ ನಿರೀಕ್ಷೆ ಇದೆ. ಸಿಟಿಪಿಯಲ್ಲಿ ಆಸಕ್ತ ಚಿಕ್ಕ ಉದ್ಯಮಿಗಳಿಗೆ ತರಬೇತಿ ಹಾಗೂ ತಾಂತ್ರಿಕ ನೆರವು ನೀಡಲಾಗುತ್ತದೆ. ಇದಕ್ಕೆ ಬೇಕಿದ್ದ ಯಂತ್ರಗಳಿಗೆ ಸುಮಾರು ಒಂದು ಕೋಟಿ ಬಂಡವಾಳ ಬೇಕು. 250 ಎಚ್‌ಪಿ ಶಕ್ತಿ ಸಾಕು. 65-70 ಜನರಿಗೆ ಉದ್ಯೋಗ ಕೊಡಬಹುದು. ಎಲ್ಲ ಸೇರಿ ಐದಾರು ಕೋಟಿ ಬಂಡವಾಳ ಹೂಡಿದರೆ ಪ್ರತಿ ವರ್ಷ 12 ಕೋಟಿ ವ್ಯವಹಾರ ಸಲೀಸಾಗುತ್ತದೆ. ಹೊಸ ಹೊಸ ವಸ್ತು ತಯಾರಿಸಬಹುದು. ಸಿದ್ಧವಸ್ತುಗಳಿಗೆ ತುಂಬಾ ಬೇಡಿಕೆ ಇದೆ. ಆದರೆ ನಮಗೆ ಬಿದಿರಿನ ಚಾಪೆ ಬೇಕಾಗಿದೆ' ಎನ್ನುತ್ತ ಡಾ. ಗೋಪಾಲನ್ ಮತ್ತೆ ವಸ್ತು ಪ್ರದರ್ಶನ ಸಭಾಂಗಣಕ್ಕೆ ಬರುತ್ತಾರೆ. ಯಾವುದೇ ಖಾಸಗಿ ಉದ್ಯಮಿ ನಮ್ಮ ತಂತ್ರಜ್ಞಾನದಿಂದ ಏನೇ ಹೊಸ ವಸ್ತುಗಳನ್ನು ಉತ್ಪಾದನೆ ಮಾಡಿದರೂ ಇಲ್ಲಿ ಅದನ್ನು ಪ್ರದರ್ಶನಕ್ಕೆ ಇಡಬಹುದು ಎನ್ನುತ್ತಾರೆ. 'ಹೀಗೆ ಸಿದ್ಧ ರೂಪದ ಬಾಗಿಲು, ಕಿಟಕಿ, ಛಾವಣಿಗಳು ಸಿಗುವುದಾದರೆ ಬಡಗಿಗಳಿಗೆ ಕೆಲಸವೇ ಇರುವುದಿಲ್ಲ ಅಲ್ಲವೆ?' ಎಂದು ನಾವು ಕೇಳುತ್ತೇವೆ.

'ಹೌದು, ಅವರೆಲ್ಲ ಎಂಜಿನಿಯರ್‌ಗಳಾಗುತ್ತಾರೆ' ಎನ್ನುತ್ತ ಡಾ. ಗೋಪಾಲನ್ ಮೆಟ್ಟಿಲು ಇಳಿಯುತ್ತಾರೆ. ಪಾವಟಿಗೆಯ ಪಕ್ಕದ ನೀಲವರ್ಣ ರೇಲಿಂಗ್ ಮೇಲೆ ಕೈ ಜಾರಿಸುತ್ತ, 'ನೋಡಿ ಕಳೆದ ಏಳು ವರ್ಷಗಳಿಂದ ಇದು ತುಸುವೂ ಮುಕ್ಕಾಗಿಲ್ಲ. ಬಣ್ಣ ಕಳೆದುಕೊಂಡಿಲ್ಲ. ತುಕ್ಕು ಹಿಡಿದಿಲ್ಲ' ಎನ್ನುತ್ತಾರೆ. ನಮ್ಮ ದೃಷ್ಟಿ ಮತ್ತೊಮ್ಮೆ ಆ ಯಂತ್ರದತ್ತ ಹೋಗುತ್ತದೆ. ಅದು ಈಗಲೂ ಹಗ್ಗವನ್ನು ನುಂಗುತ್ತ ಉದ್ದುದ್ದ ಕೋಡ ಬಳೆಯಂಥ ಕೊಳವೆಗಳನ್ನು ಕಕ್ಕುತ್ತಿದೆ.

ಹೆಚ್ಚಿನ ಮಾಹಿತಿಗೆ: ನಿರ್ದೇಶಕರು, ಸಿಟಿಪಿ, 205 ಬಂಡೆಮಠ, ಕೆಂಗೇರಿ ಉಪನಗರ, ಬೆಂಗಳೂರು-560060 ಫೋನ್: 080-56997605, 56681005; ಡಾ. ಗೋಪಾಲನ್ ಇಮೇಲ್: drgopal@blr.vsnl.net.in Website: www.rvtifac-cdc



ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿಡಲು ಹೊಸ 'ಕಾಂಪೊಸಿಟ್' ಕಸದ ಬುಟ್ಟಿಗಳು





ಮರದ ಹೊಟ್ಟಿಗೆ ಹೊಸ ರೂಪ ನೀಡಬಲ್ಲ ಮೌಲ್ಡಿಂಗ್ ಯಂತ್ರ (ಬಲಚಿತ್ರ) ಸಿಟಿಪಿ ವಸ್ತು ಪ್ರದರ್ಶನಾಲಯ



ಬಿದಿರಿನ ಹಲಗೆಗಳ ಗೋಡೆ, ಛಾವಣಿಯ ಮಾದರಿ ಮನೆ

ವಿಮಾನಯಾನದಲ್ಲಿ ಹೊಸ ಶಕೆ

500 ರೂಪಾಯಿ ದರದಲ್ಲಿ ವಿಮಾನ ಏರುವ ಕನಸು ನನಸಾಗುತ್ತಿದೆ. ಇಂತಹ ಅಗ್ಗದ ಪ್ರಯಾಣ ಬೇಕಾದಲ್ಲಿ ಮೂರು ತಿಂಗಳ ಮೊದಲೇ ಟಿಕೆಟ್ ಕಾಯ್ದಿರಿಸಬೇಕು ಎನ್ನುವುದೇ ಷರತ್ತು. ಒಂದು ತಿಂಗಳು ಅಥವಾ ವಾರ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸಿ ಪ್ರಯಾಣಿಕರು ಅತಿ ಕಡಿಮೆ ದರದಲ್ಲಿ ವಿಮಾನವೇರುವ ದಿನಗಳೂ ಬರಬಹುದು!

ಶಿವರಾಂ

ವಿಮಾನಯಾನ ಕ್ಷೇತ್ರದಲ್ಲಿಯೂ ಈಗ ಜೋರು ದರ ಪೈಪೋಟಿ. ಬಾನಿನ ಅಂಚು ಅಂಚನ್ನೂ ವಿಮಾನಗಳ ರೆಕ್ಕೆಗಳು ಸ್ಪರ್ಶಿಸಿ- ವ್ಯಾಪಿಸಿ ಹಾರಾಟ ನಡೆಸುತ್ತಿರುವಂತೆಯೇ ಆಕಾಶದಲ್ಲಿ ಹಾರಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ವಿಮಾನಯಾನಿಗಳನ್ನು ಸೆಳೆಯಲು ಪ್ರಯಾಣ ಸೇವಾ ಸಂಸ್ಥೆಗಳು ನಾನಾ ಕಸರತ್ತು ನಡೆಸುತ್ತಿವೆ. ಉತ್ತಮ ಊಟೋಪಚಾರ, ಐಷಾರಾಮಿ ವ್ಯವಸ್ಥೆ ಮತ್ತಿತರ ಸೌಲಭ್ಯಗಳ 'ಆಮಿಷ' ಒಡ್ಡಿ ಪ್ರಯಾಣಿಕರನ್ನು ಸೆಳೆಯುತ್ತಿದ್ದ ವಿಮಾನಯಾನ ಸೇವಾ ಸಂಸ್ಥೆಗಳು ಇದೀಗ 'ಕೈಗೆಟುಕುವ ದರ'ದಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಿವೆ.

ಕೇವಲ 500 ರೂಪಾಯಿ (ತೆರಿಗೆ ಹೊರತುಪಡಿಸಿ) ತೆತ್ತು ಬೆಂಗಳೂರಿನಿಂದ ದೇಶದ ರಾಜಧಾನಿಗೆ ಹಾರಬಹುದಾದ ಅವಕಾಶವನ್ನು 'ಏರ್ ಡೆಕ್ಕನ್' ಸಂಸ್ಥೆ ಆರಂಭಿಸಿದೆ. ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಅಂಬೆಗಾಲಿಕ್ಕುತ್ತಿರುವ ಈ ಸಂಸ್ಥೆ, ತಳಪಾಯ ಭದ್ರಪಡಿಸಿಕೊಳ್ಳಲು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ವಿದೇಶಿ ನಿರ್ಮಿತ ಅತ್ಯಾಧುನಿಕ ತಂತ್ರಜ್ಞಾನದ, ದೊಡ್ಡ ವಿಮಾನಗಳ ಖರೀದಿ, ನುರಿತ ಪೈಲಟ್‌ಗಳ ನೇಮಕ ಮಾಡಿಕೊಂಡಿರುವ ಸಂಸ್ಥೆ ತನ್ನ 'ವಿನೂತನ' ಯೋಜನೆಯ ಮೂಲಕ ವಿಮಾನ ಯಾನಿಗಳನ್ನು ಸೆಳೆಯಲು ಮುಂದಾಗಿದೆ.

500 ರೂಪಾಯಿ ದರದ ಪ್ರಯಾಣ ಬೇಕಾದಲ್ಲಿ ಮೂರು ತಿಂಗಳ ಮೊದಲೇ ಟಿಕೆಟ್ ಕಾಯ್ದಿರಿಸಬೇಕು. ಇದು ಸಂಸ್ಥೆಯ ಷರತ್ತು. ಇನ್ನು ಕೆಲವೇ ದಿನಗಳಲ್ಲಿ ತಿಂಗಳು ಅಥವಾ ವಾರ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸಿ ಪ್ರಯಾಣಿಕರು ಅತಿ ಕಡಿಮೆ ದರದಲ್ಲಿ ವಿಮಾನವೇರುವ ದಿನಗಳು ಬಂದರೂ ಬರಬಹುದು!

ಆ. 25ರಂದು ಸಂಸ್ಥೆಯು ಸಾಮಾನ್ಯ ಮತ್ತು ಮಧ್ಯಮ ವರ್ಗದ ಪ್ರಯಾಣಿಕರಿಗೆ ಕೈಗೆಟುಕುವ ದರದಲ್ಲಿ ವಿಮಾನಯಾನ ಸೌಲಭ್ಯ ಕಲ್ಪಿಸುವ ಮೂಲಕ ದೇಶೀಯ ವಿಮಾನಯಾನ ಕ್ಷೇತ್ರದಲ್ಲಿ ಹೊಸ ಶಕೆ ಆರಂಭಿಸಿತು. ಅಲ್ಲದೆ ಖಾಸಗಿ ವಿಮಾನಯಾನ ಕಂಪೆನಿಗಳಿಗೆ ಪ್ರಯಾಣ ದರದಲ್ಲಿಯೂ ಪೈಪೋಟಿ ಶುರು ಮಾಡಿತು.

ಷರತ್ತಿನಂತೆ ಟಿಕೆಟ್‌ಗಳನ್ನು ಕಾಯ್ದಿರಿಸುವ ಶೇ 25ರಷ್ಟು (45 ಮಂದಿ) ಪ್ರಯಾಣಿಕರು 500ರಿಂದ 4,999 ರೂಪಾಯಿ ನಡುವಣ ದರದಲ್ಲಿ 'ಏರ್ ಡೆಕ್ಕನ್'ನ ವಿಮಾನದಲ್ಲಿ ಬೆಂಗಳೂರು- ನವದೆಹಲಿ ನಡುವೆ ವಿಮಾನಯಾನ ಮಾಡಬಹುದು. ನವದೆಹಲಿ- ಮುಂಬೈ ಹಾಗೂ ಮುಂಬೈ- ಬೆಂಗಳೂರು ನಡುವೆ ಸಂಚರಿಸಲಿರುವ 'ಏರ್-ಡೆಕ್ಕನ್' ವಿಮಾನಗಳಿಗೂ ಈ ದರ ಅನ್ವಯವಾಗಲಿದೆ. ಈ ಪೈಕಿ ಮೊದಲೇ ಟಿಕೆಟ್ ಕಾಯ್ದಿರಿಸುವ ಐದಾರು ಮಂದಿ ಪ್ರಯಾಣಿಕರಿಗೆ ಮಾತ್ರ 500 ರೂಪಾಯಿ ದರದಲ್ಲಿ (ತೆರಿಗೆ ಹೊರತುಪಡಿಸಿ) ವಿಮಾನಯಾನ ಮಾಡುವ ಅವಕಾಶ ದೊರೆಯಲಿದೆ. ತೆರಿಗೆ ಸೇರಿ ಈ ದರ 700 ರೂಪಾಯಿ ಆಗಲಿದೆ.

ಸಾಮಾನ್ಯ ಮತ್ತು ಮಧ್ಯಮ ವರ್ಗದ ಪ್ರಯಾಣಿಕರಿಗೆ ಅತಿ ಕಡಿಮೆ ದರದಲ್ಲಿ ವಿಮಾನಯಾನ ಸೌಲಭ್ಯ ಕಲ್ಪಿಸುವುದರ ಜತೆಗೆ ಗ್ರಾಮೀಣ ಪ್ರದೇಶದ ನಗರ- ಪಟ್ಟಣಗಳಿಗೆ ವಿಮಾನಯಾನ ಸೌಲಭ್ಯ ಕಲ್ಪಿಸುವುದು ಸಂಸ್ಥೆಯ ಮುಖ್ಯ ಉದ್ದೇಶ. ಇದೇ ಉದ್ದೇಶದಿಂದ ಇನ್ನು ಏಳೆಂಟು ತಿಂಗಳಲ್ಲಿ ಇನ್ನೂ 11 ವಿಮಾನಗಳ ಸಂಚಾರವನ್ನು ದೇಶದ ವಿವಿಧೆಡೆ ಆರಂಭಿಸಲಾಗುವುದು ಎಂದು ಸಂಸ್ಥೆ ತಿಳಿಸಿದೆ.

'ಒಟ್ಟಾರೆ ದೇಶದ ಗ್ರಾಮೀಣ ಭಾಗದ ನಗರ-ಪಟ್ಟಣಗಳಿಗೆ ವಿಮಾನಯಾನ ಸೌಲಭ್ಯವನ್ನು ಕಲ್ಪಿಸುವುದೇ ನಮ್ಮ ಗುರಿ. ಆಗಲೇ ನಮ್ಮ ದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಗಲು ಸಾಧ್ಯವಾಗುತ್ತದೆ' ಎನ್ನುತ್ತಾರೆ 'ಏರ್ ಡೆಕ್ಕನ್'ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್.ಗೋಪಿನಾಥ್.

ಆ. 25ರಂದು ಬೆಂಗಳೂರಿನ ವಿಮಾನ ನಿಲ್ದಾಣದಿಂದ ಪತ್ರಕರ್ತರ ತಂಡವನ್ನು 'ಎ-320' ವಿಮಾನದಲ್ಲಿ ನವದೆಹಲಿಗೆ ತಮ್ಮ ಜತೆ ಕರೆದೊಯ್ದ ಗೋಪಿನಾಥ್, ಸಂಸ್ಥೆಯ ಉದ್ದೇಶ ಹಾಗೂ ಯೋಜನೆಗಳನ್ನು ಹಂಚಿಕೊಂಡರು. ಬೇರೆ ವಿಮಾನಯಾನ ಕಂಪೆನಿಗಳಿಗೆ ಹೋಲಿಸಿದರೆ 'ಏರ್ ಡೆಕ್ಕನ್'ನ ಪ್ರಯಾಣ ದರ ಕೂಡ ಶೇ 30ರಷ್ಟು ಕಡಿಮೆ. ಈಗಾಗಲೇ 500 ರೂಪಾಯಿನ ಟಿಕೆಟ್‌ಗಳು ಸೆಪ್ಟೆಂಬರ್ ಅಂತ್ಯದವರೆಗೂ ಮಾರಾಟವಾಗಿದ್ದರೂ (ಸೋಲ್ಡ್ ಔಟ್) ಆಗಿದ್ದರೂ ಭವಿಷ್ಯದಲ್ಲಿಯೂ ಈ ದರ ಹೆಚ್ಚಿಸುವುದಿಲ್ಲ. ಪ್ರಯಾಣಿಕರಿಂದ ಬೇಡಿಕೆ ಹೆಚ್ಚಾದಲ್ಲಿ ವಿಮಾನಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತದೆಯೇ ಹೊರತು ದರ ಹೆಚ್ಚಿಸುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ ಗೋಪಿನಾಥ್.



ಪ್ರತಿ ದಿನ ಸಂಚಾರ

'ಎ-320' ವಿಮಾನ ಬೆಂಗಳೂರು- ನವದೆಹಲಿ ನಡುವೆ ಪ್ರತಿ ದಿನ ಸಂಚರಿಸಲಿದೆ. ಮೂರು ತಿಂಗಳು ಮೊದಲೇ ಟಿಕೆಟ್ ಕಾಯ್ದಿರಿಸುವ 45 ಮಂದಿ ಪ್ರಯಾಣಿಕರು ರೂ 500ರಿಂದ 4,999, ಆನಂತರದ 90 ಮಂದಿ ಪ್ರಯಾಣಿಕರು ರೂ 5,000ದಿಂದ 8,000 ದರದಲ್ಲಿ ಪ್ರಯಾಣ ಮಾಡುವ ಸೌಲಭ್ಯ ಪಡೆಯಬಹುದು. ಕೊನೆಯಲ್ಲಿ ಟಿಕೆಟ್ ಕಾಯ್ದಿರಿಸುವ 45 ಮಂದಿ ಪ್ರಯಾಣಿಕರಿಗೆ 10,000ದಿಂದ 10,400 ರೂಪಾಯಿ ದರ ಅನ್ವಯವಾಗಲಿದೆ. ಇತರೆ ವಿಮಾನಯಾನ ಕಂಪೆನಿಗಳಿಗೆ ಹೋಲಿಸಿದರೆ ಈ ದರ ಶೇ 30ರಷ್ಟು ಕಡಿಮೆ.

ಆಸಕ್ತರು ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ವೆಬ್‌ಸೈಟ್- www.airdeccan.net

ದೂರವಾಣಿ ಸಂಖ್ಯೆ 98457 77008, 51148190ರಿಂದ 99, 8567523 8567524, ಬೆಂಗಳೂರಿನ ಕಚೇರಿ ವಿಳಾಸ: ಏರ್ ಡೆಕ್ಕನ್, 213/33, 7ನೇ ಕ್ರಾಸ್, ವಸಂತನಗರ, ಬೆಂಗಳೂರು- 5600052.

ಎಷ್ಟು ಸುರಕ್ಷಿತ?

ಕೇವಲ 500 ರೂಪಾಯಿ ದರದಲ್ಲಿ ಪ್ರಯಾಣ ಮಾಡುವ ವಿಮಾನ ಎಷ್ಟು ಸುರಕ್ಷಿತ ಎಂಬ ಪ್ರಶ್ನೆಯೂ ಪ್ರಯಾಣಿಕರನ್ನು ಸಹಜವಾಗಿ ಕಾಡುತ್ತದೆ. ಆದರೆ 'ಎ-320' ವಿಮಾನ ಸುಖಕರ ಪ್ರಯಾಣಕ್ಕೆ ಇತರ ಕಂಪೆನಿಗಳ ವಿಮಾನಗಳಿಗಿಂತಲೂ ಯಾವುದರಲ್ಲಿಯೂ ಕಡಿಮೆಯಿಲ್ಲ. ಇತರೆ ವಿಮಾನಗಳಲ್ಲಿ 140 ಆಸನಗಳಿದ್ದರೆ, ಈ ವಿಮಾನದ ಆಸನಗಳ ಸಂಖ್ಯೆ 180.

ಇನ್ನು ಪ್ರತಿ ಬಾರಿ ವಿಮಾನ ಗಗನಕ್ಕೇರಿ ಇಳಿದಾಗಲೆಲ್ಲಾ ವಿಮಾನ ತಯಾರಿಸಿದ ಕಂಪೆನಿಯೇ ವಿಮಾನದ ತಾಂತ್ರಿಕ ದೋಷಗಳ ಬಗ್ಗೆ ತಪಾಸಣೆ ನಡೆಸಿ ನಿರ್ವಹಿಸಲಿದೆ. ಇದಕ್ಕಾಗಿಯೇ ಸಂಸ್ಥೆಯು ವಾರ್ಷಿಕ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. 'ಇಂಡಿಯನ್ ಏರ್‌ಲೈನ್ಸ್' ಸಂಸ್ಥೆಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುವ ಎಂಜಿನಿಯರ್‌ಗಳನ್ನೇ 'ಏರ್ ಡೆಕ್ಕನ್' ಆಯ್ಕೆ ಮಾಡಿಕೊಂಡಿದೆ. ಇನ್ನು 'ಎ-320' ವಿಮಾನದ ಪೈಲಟ್ ಕೂಡ 'ಇಂಡಿಯನ್ ಏರ್‌ಲೈನ್ಸ್' ಸಂಸ್ಥೆಯಲ್ಲಿ ಕೆಲಸ ಮಾಡಿದ ಅನುಭವ ಹೊಂದಿದವರೇ.

ಎಲ್ಲಾ ವಿಮಾನಗಳಲ್ಲಿಯಂತೆ ಇಲ್ಲಿಯೂ ಮನರಂಜನೆಗೆ ಅವಕಾಶ ಉಂಟು. ಆಸನಗಳ ಮೇಲ್ಭಾಗದಲ್ಲಿ ಚಿಕ್ಕ ಟೆಲಿವಿಷನ್ ಸೆಟ್‌ಗಳನ್ನು ಅಳವಡಿಸಲಾಗಿದೆ. ಗಗನಸಖಿಯರೂ ಇದ್ದಾರೆ. ಪ್ರಯಾಣಿಕರಿಗೆ ಅವರು ಟೀ, ತಿಂಡಿ, ಪಾನೀಯಗಳನ್ನು ನೀಡುತ್ತಾರೆ.

ದೇಶದಾದ್ಯಂತ 2,500 ಏಜೆಂಟರನ್ನು ಹೊಂದಿರುವ ಸಂಸ್ಥೆಯು ಇಂಟರ್‌ನೆಟ್ ಮೂಲಕವೇ ಟಿಕೆಟ್‌ಗಳನ್ನು ಕಾಯ್ದಿರಿಸಲಿದೆ. ಒಂದು ವೇಳೆ 500 ರೂಪಾಯಿ ದರದಲ್ಲಿ ಟಿಕೆಟ್ ಕಾಯ್ದಿರಿಸಿದ ಪ್ರಯಾಣಿಕರು ಪ್ರಯಾಣ ರದ್ದುಪಡಿಸಿದರೆ ಹಣ ವಾಪಸು ನೀಡುವುದಿಲ್ಲ ಎಂದು ಸಂಸ್ಥೆಯು ಸ್ಪಷ್ಟಪಡಿಸಿದೆ.

ರಾಷ್ಟ್ರದ ಗ್ರಾಮೀಣ ಭಾಗದ 400 ವಿಮಾನ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುವುದು ಸಂಸ್ಥೆಯ ಗುರಿ. ಆರಂಭದಲ್ಲಿ ಸ್ವಲ್ಪ ನಷ್ಟವಾದರೂ ಗ್ರಾಮೀಣ ನಗರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಿದ ನಂತರ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತು ಲಾಭ ಸಿಗಬಹುದು ಎಂಬುದು ಸಂಸ್ಥೆಯ ಲೆಕ್ಕಾಚಾರ.

ಒಟ್ಟಿನಲ್ಲಿ 'ಏರ್ ಡೆಕ್ಕನ್' ಸಾಮಾನ್ಯ ಮತ್ತು ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ವಿಮಾನಯಾನ ಸೌಲಭ್ಯ ಕಲ್ಪಿಸುವುದರ ಜತೆಗೆ ಪ್ರಯಾಣ ದರದಲ್ಲಿ ಇತರ ವಿಮಾನಯಾನ ಕಂಪೆನಿಗಳಿಗೆ ಸವಾಲು ಹಾಕಿದೆ. ದೇಶವು ಆರ್ಥಿಕವಾಗಿ ಸಬಲವಾಗಬೇಕಾದರೆ ಇತರ ಕಂಪೆನಿಗಳೂ ಕಡಿಮೆ ದರದಲ್ಲಿ ವಿಮಾನಯಾನ ಸೇವೆ ಒದಗಿಸಲು ಕೇಂದ್ರ ಸರ್ಕಾರ ಅನುಮತಿ ನೀಡಬೇಕು ಎಂದು ಅಭಿಪ್ರಾಯಪಡುತ್ತಾರೆ ಗೋಪಿನಾಥ್.

ಪ್ರಜಾವಾಣಿ

ಕೃಷಿ









ಅತ್ಯಲ್ಪ ಭತ್ತದ ಬೀಜ, ಅಲ್ಪ ನೀರು, ಸಾವಯವ ಗೊಬ್ಬರ- ಇವಿಷ್ಟರಿಂದಲೇ ಉತ್ತಮ ಇಳುವರಿಯನ್ನು ಪಡೆಯಬಹುದಾದ ಮಡಗಾಸ್ಕರ್ ವಿಧಾನ ಈಗ ಕರ್ನಾಟಕದಲ್ಲಿ ಕಾಲೂರತೊಡಗಿದೆ. ನಂಜನಗೂಡಿನ ಬಳಿ ಜೀಕಳ್ಳಿಯಲ್ಲಿ ಹಾಗೂ ಮೈಸೂರಿನ ಬೆಳವತದಲ್ಲಿ ನಡೆಯುತ್ತಿರುವ ಈ ಕ್ರಾಂತಿಕಾರಿ ಪ್ರಯೋಗವನ್ನು ನೋಡಬನ್ನಿ



ಮೈಸೂರಿಗೂ ಬಂತು ಮಡಗಾಸ್ಕರ್ ವಿಧಾನ

ಮಾಮೂಲು ಭತ್ತದ ಬೆಳೆಗೆ ಬಳಸುವುದಕ್ಕಿಂತ ಅರ್ಧದಷ್ಟು ನೀರನ್ನು ಬಳಸಿ, ಅತಿ ಕಡಿಮೆ ಬಿತ್ತನೆ ಬೀಜ ಬಳಸಿ, ರಾಸಾಯನಿಕ ಗೊಬ್ಬರ ಕೂಡ ಹಾಕದೆ ಮೂರು ಪಟ್ಟು ಹೆಚ್ಚು ಇಳುವರಿ ಪಡೆಯಲು ಸಾಧ್ಯವೇ?

ನಂಜನಗೂಡು ತಾಲ್ಲೂಕಿನ 25 ಹೆಕ್ಟೇರ್ ಪ್ರದೇಶದಲ್ಲಿ ಅಂಥ ಪ್ರಾಯೋಗಿಕ ಕೃಷಿ ಆರಂಭವಾಗಿದೆ. ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಕೆ.ಆರ್.ಕೃಷ್ಣಯ್ಯ ಅವರ ಮಾರ್ಗದರ್ಶನದಲ್ಲಿ.

ಹೈದ್ರಾಬಾದ್‌ನ ಎನ್.ಜಿ. ರಂಗಾ ಕೃಷಿ ವಿವಿಯಿಂದ ಅವರು ಈ ವಿಧಾನವನ್ನು ಕಲಿತು ಬಂದಿದ್ದಾರೆ.



ನೀರನ್ನು ನಿಲ್ಲಿಸದೆ ಹುಲುಸಾದ ಪೈರು

ಇದಕ್ಕೆ 'ಮಡಗಾಸ್ಕರ್ ಭತ್ತ ಬೆಳೆ ವಿಧಾನ' ಅಥವಾ 'ಶ್ರೀ' ಪದ್ಧತಿ ಎಂತಲೂ ಹೆಸರಿದೆ. (SRI ಅಂದರೆ ಸಿಸ್ಟಮ್ ಆಫ್ ರೈಸ್ ಇಂಟೆನ್ಸಿಫಿಕೇಶನ್ ಅರ್ಥಾತ್ ಭತ್ತದ ಉನ್ನತೀಕರಣ ಪದ್ಧತಿ). ಮಾಮೂಲು ವಿಧಾನದಲ್ಲಿ ಹೆಕ್ಟೇರಿಗೆ ಇಳುವರಿ 2.50ರಿಂದ 3 ಕ್ವಿಂಟಾಲ್ ಮಾತ್ರ ಇದ್ದರೆ 'ಶ್ರೀ' ವಿಧಾನದಲ್ಲಿ 8ರಿಂದ 17 ಕ್ವಿಂಟಾಲ್ ಇಳುವರಿ ಸಾಧ್ಯವಿದೆ). ಜೊತೆಗೆ ನೀರು ಬಳಕೆಯಲ್ಲಿಯೂ ಅರ್ಧದಷ್ಟು ಉಳಿತಾಯ ಸಾಧ್ಯವಿದೆ.

ಮೂಲತಃ ಮಡಗಾಸ್ಕರ್ ದೇಶದ ಕೃಷಿ ಪದವೀಧರ ವಾದ್ರಿ ಹೆನ್ರಿ ಡಿ.ಲಲಾನೆ ಈ ಪದ್ಧತಿಯನ್ನು ಕಂಡು ಹಿಡಿದರು. ಕೃಷಿಕರಿಗೆ ಜಾಗೃತಿ ಮೂಡಿಸುವ 'ಟೆಫಿ ಸೈನಾ' ಎನ್ನುವ ಸ್ವಯಂ ಸೇವಾ ಸಂಸ್ಥೆ ಈ ಪದ್ಧತಿಯನ್ನು ಅಲ್ಲಿ ಪ್ರಚಾರ ಮಾಡುತ್ತಿದೆ. ಇಂತಹ ಒಂದು ಪದ್ಧತಿ ಇದೆ ಎನ್ನುವುದೇ 1997ರವರೆಗೆ ಪ್ರಪಂಚದ ಉಳಿದ ಭಾಗಕ್ಕೆ ಗೊತ್ತಿರಲಿಲ್ಲ.

ಈ ಕೃಷಿ ಪದ್ಧತಿಯು ಚೀನಾ, ಇಂಡೋನೇಷಿಯ, ಕಾಂಬೋಡಿಯ, ಥೈಲ್ಯಾಂಡ್, ಬಾಂಗ್ಲಾದೇಶ ಹಾಗೂ ಶ್ರೀಲಂಕಾದಲ್ಲಿ ಜನಪ್ರಿಯವಾಯಿತು. ಹೈದ್ರಾಬಾದ್‌ನ ಡಾ.ಅಡಪಟ್ಟಿ ಸತ್ಯನಾರಾಯಣ ಶ್ರೀಲಂಕಾಗೆ ತೆರಳಿ ಈ ಪದ್ಧತಿಯ ಬಗ್ಗೆ ಅರಿತು ಕೆಲ ಬದಲಾವಣೆಯೊಂದಿಗೆ ಆಂಧ್ರದ 20 ಜಿಲ್ಲೆಗಳಲ್ಲಿ ರೈತರಿಗೆ ಪರಿಚಯಿಸಿದರು.

ಹಾಗೆ ನೋಡಿದರೆ ಇದು ಕರ್ನಾಟಕಕ್ಕೆ ಮೂರು ವರ್ಷಗಳ ಹಿಂದೆಯೇ ಬಂದಿದೆ. ನಮ್ಮ ಕೃಷಿ ಪಂಡಿತ ('ನಾಡೋಜ' ಪ್ರಶಸ್ತಿ ವಿಜೇತ) ನಾರಾಯಣ ರೆಡ್ಡಿ ಇದನ್ನು ಮೊದಲು ಪ್ರಯೋಗಿಸಿದವರು. ಕಳೆದ ವರ್ಷ ಇದೇ ಪುಟದಲ್ಲಿ ಅವರ ಸಾಧನೆಯ ವಿಚಾರ ಬರೆದಾಗ ಫಸಲಿನ ಇಳುವರಿ ನೋಡಲು ನೂರಲ್ಲ, ಸಾವಿರಾರು ಕೃಷಿಕರು ಬಂದಿದ್ದರು. ನೋಡಿ, ನೂರಾರು ರೈತರು ತಾವಾಗಿ ಈ ವಿಧಾನದಲ್ಲಿ ಭತ್ತ ಬೆಳೆಯಲು ಪ್ರಾರಂಭ ಮಾಡಿದ್ದಾರೆ. ಯಾಕೆ ಯಾವ ಕೃಷಿ ವಿಜ್ಞಾನಿಯೂ, ಯಾವ ಸರಕಾರಿ ಕೃಷಿ ಅಧಿಕಾರಿಯೂ ಇದರತ್ತ ಆಸಕ್ತಿ ತೋರಿಸುತ್ತಿಲ್ಲ ಎಂದು ಎಲ್ಲರೂ ಹೇಳುತ್ತಿದ್ದಾಗ ಮೈಸೂರಿನ ಕೃಷಿ ಅಧಿಕಾರಿ ಕೆ. ಆರ್. ಕೃಷ್ಣಯ್ಯ ಆಸಕ್ತಿ ತಾಳಿದರು. ಆಂಧ್ರಪ್ರದೇಶಕ್ಕೆ ಹೋಗಿ ಕಲಿತು ಬಂದರು. ನಂತರ ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಕಾರ್ಯಾಗಾರದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತರಬೇತಿ ಸಹ ನೀಡಿದರು.

ಈ ವಿಧಾನದಲ್ಲಿ ಪ್ರಮುಖ ಹಂತವೆಂದರೆ ಬತ್ತದ ಮಡಿ ಹಾಗೂ ನಾಟಿ. ಯಾವುದೇ ತಳಿಯಿರಲಿ 2 ಕೆ.ಜಿ ಬೀಜ ಸಾಕು. (25 ಕೆ.ಜಿ ಬೀಜ ಬೇಕಿಲ್ಲ).

ಪದ್ಧತಿಯ ಮುಖ್ಯ ಅಂಶ: 10-12 ದಿನದ ಪೈರನ್ನು ನಾಟಿ ಮಾಡಬೇಕು. ನಾಟಿ ಸಮಯದಲ್ಲಿ ಪೈರು ಹಾಗೂ ಬೇರಿಗೆ ಏಟಾಗಬಾರದು. 25 ಹಾಗೂ 25 ಸೆ.ಮೀ ಅಳತೆಯಲ್ಲಿ ನೆಡಬೇಕು. ಕಳೆ ನಿಯಂತ್ರಿಸಬೇಕು. ಗದ್ದೆಯಲ್ಲಿ ನೀರು ನಿಲ್ಲದಂತೆ ಆದರೆ ತೇವ ಇರುವಂತೆ ನಿರ್ವಹಣೆ ಮಾಡಬೇಕು. ಸಾವಯವ ಗೊಬ್ಬರ ಬಳಸಬೇಕು.

ಒಂದು ಎಕರೆ ಕೃಷಿ ಮಾಡಲು ಒಂದು ಮೀಟರ್ ಅಗಲ ಹಾಗೂ 20 ಮೀಟರ್ ಉದ್ದದ ಎರಡು ಕೆಸರು ಮಡಿ ಸಿದ್ಧ ಮಾಡಬೇಕು. ಬೀಜವನ್ನು 12 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, 24 ಗಂಟೆ ಕಾಲ ಗೋಣಿ ಚೀಲದಲ್ಲಿ ಹಾಕಿ ಮೊಳಕೆ ಬರಿಸಬೇಕು. ಮಡಿಯ ಮೇಲೆ ಒಂದು ಅಂಗುಲ ಸಾವಯವ ಗೊಬ್ಬರ ಹಾಕಿ ಒಂದು ಚದರ ಮೀಟರ್‌ಗೆ 50 ಗ್ರಾಂ ಬೀಜವನ್ನು ತೆಳ್ಳಗೆ ಚೆಲ್ಲಬೇಕು. ಕೊನೆಯಲ್ಲಿ ಮಡಿಯ ಮೇಲೆ ಹುಲ್ಲನ್ನು ಹಾಕಿ ಬೆಳಗ್ಗೆ ಹಾಗೂ ಸಂಜೆ ನೀರು ಹಾಕಬೇಕು. ಮೂರ್ನಾಲ್ಕು ದಿನಗಳಲ್ಲಿ ಪೈರು ಬರುತ್ತದೆ. ಆಗ ಹುಲ್ಲನ್ನು ತೆಗೆದು ನೀರನ್ನು ಹಾಕುತ್ತಿರಬೇಕು. 10-12ನೇ ದಿನಕ್ಕೆ ಪೈರಿನಲ್ಲಿ ಎರಡು ಎಲೆಗಳು ಬಂದಿರುತ್ತದೆ. ಆಗ ಪೈರನ್ನು ನಾಟಿ ಮಾಡಲು ಸಿದ್ಧತೆ ಮಾಡಿಕೊಳ್ಳಬೇಕು. ನಾಟಿಗೆ ಕೆಸರು ಗದ್ದೆ ತಯಾರಿಸಿ ಒಂದು ಹೆಕ್ಟೇರ್ ಗದ್ದೆಗೆ 10 ಟನ್ ಗೊಬ್ಬರ ಹಾಕಬೇಕು. ನೀರು ಬಸಿಯಲು ಎರಡು ಮೀಟರ್‌ಗೆ ಸಣ್ಣ ಕಾಲುವೆ ಮಾಡಿ. 25 ಸೆ.ಮೀ ಉದ್ದ ಹಾಗೂ ಇಷ್ಟೇ ಅಗಲದ ಅಂತರದಲ್ಲಿ ನಾಟಿ ಮಾಡಬೇಕು. ಪೈರನ್ನು ಮಣ್ಣು ಸಮೇತ ತೆಗೆದ 15ರಿಂದ 30 ನಿಮಿಷದೊಳಗೆ ನಾಟಿ ಮಾಡಬೇಕು. ನಾಟಿ ಮಾಡುವಾಗ ಬೇರು ನೇರವಾಗಿಯೇ ಇರಬೇಕು. ನಂತರ 8-10 ದಿನಗಳ ನಂತರ 'ರೋಟೋ ವೀಡರ್'ನಿಂದ ಕಳೆ ತೆಗೆಯ ಬೇಕು. ಗದ್ದೆಯಲ್ಲಿ ಸದಾ ತೇವಾಂಶವನ್ನು ಉಳಿಸಿಕೊಳ್ಳಬೇಕು.



ನೇರ ಲಂಬರೇಖೆ, ನೇರ ಅಡ್ಡರೇಖೆಯ ಮೇಲೆ ನಾಟಿ: ಸಸಿಗಳ ಮಧ್ಯೆ ಇರುವ ಅಂತರ ಬಹು ಮಹತ್ವದ್ದು

'ಎರಡೇ ಎಲೆಯ ಪೈರನ್ನು ನಾಟಿ ಮಾಡುವುದರಲ್ಲಿಯೇ ಈ ಪದ್ಧತಿಯ ಯಶಸ್ಸು ಅಡಗಿದೆ. ಬತ್ತದ ಮೊದಲ ಹಾಗೂ ಎರಡನೆಯ ಎಲೆಗಳಿಂದಲೇ ಶೇ 64ರಷ್ಟು ತೆಂಡೆಗಳು ಬರುತ್ತವೆ. ಈ ಕಾಲ ಮೀರಿದರೆ, ಅಥವಾ ಮೊದಲೆರಡು ಎಲೆಗಳು ಮಣ್ಣಿನಲ್ಲಿ ಹೂತರೆ ಇಳುವರಿ ಕಡಿಮೆಯಾಗುತ್ತದೆ' ಎಂದು ಕೃಷ್ಣಯ್ಯ ವಿವರಿಸುತ್ತಾರೆ. ಸಸಿ ಸದಾ ನೀರಿನಲ್ಲಿ ಮುಳುಗಿದರೆ, ಮಣ್ಣಿಗೆ ಸರಿಯಾಗಿ ಗಾಳಿ ದೊರಕದೆ ಉಪಕಾರಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆ ಕುಗ್ಗಿ ಇಳುವರಿ 50%ರಷ್ಟು ಇಳಿಯುತ್ತದೆ ಎಂದು ಎಚ್ಚರಿಸುತ್ತಾರೆ.

ಮೈಸೂರಿನ ಪ್ರಯೋಗ ಯಶಸ್ವಿಯಾದರೆ ಈ ಒಂದು ಜಿಲ್ಲೆಗೆ 75 ಸಾವಿರ ಕ್ವಿಂಟಾಲ್ ಬೀಜದ ಬದಲು ಕೇವಲ 5 ಸಾವಿರ ಕ್ವಿಂಟಾಲ್ ಬೀಜ ಸಾಕು. ಹತ್ತು ಕೋಟಿ ರೂಪಾಯಿ ಉಳಿಸಬಹುದು. ಕಾವೇರಿ ಕಣಿವೆಯ ನೀರಿನ ಕದನ ತಗ್ಗಿಸಬಹುದು ಎನ್ನುತ್ತಾರೆ ಕೆ.ಆರ್.ಕೃಷ್ಣಯ್ಯ.

ಹೆಚ್ಚಿನ ಮಾಹಿತಿಗೆ ಕೆ.ಆರ್.ಕೃಷ್ಣಯ್ಯ, ಜಂಟಿ ಕೃಷಿ ನಿರ್ದೇಶಕರು, ಸರ್ಕಾರಿ ಆಡಳಿತ ಕಚೇರಿ ಕಟ್ಟಡ, ಮೈಸೂರು. (ಕಚೇರಿಯ ದೂರವಾಣಿ- 0821 2442239 ಮತ್ತು 2442239; ಮೊಬೈಲ್: 94480 52458)

■ ಯತೀಶ್ ಕುಮಾರ್ ಜಿ.ಡಿ

'ಬೀಜ ಬಿತ್ತನೆಯೇ ಸೂಕ್ತ'

'ಶ್ರೀ' ಪದ್ಧತಿಯಲ್ಲಿ ಬತ್ತದ ಸಸಿ ನಾಟಿ ಮಾಡುವುದಕ್ಕಿಂತ, ನೇರ ಬೀಜ ಬಿತ್ತನೆಯೇ ಸೂಕ್ತ ಎಂಬುದು ಅನುಭವಿ ಕೃಷಿಕ ನಾರಾಯಣ ರೆಡ್ಡಿ ಅವರ ಅಭಿಪ್ರಾಯ. ಏಕೆಂದರೆ ನಾಟಿ ಮಾಡಿದ ಸಸಿಗಳ ಬೇರುಗಳು 'J' ಆಕಾರದಲ್ಲಿದ್ದು, ಅವು 'I' ಆಕಾರಕ್ಕೆ ಬರಲು ಹೆಚ್ಚಿನ ದಿನ ಬೇಕಾಗುತ್ತದೆ. ಅಲ್ಲದೇ, ನಾಟಿ ಸಮಯದಲ್ಲಿ ಬೇರುಗಳಿಗೆ ಹಾನಿಯಾಗುವ ಸಾಧ್ಯತೆಯೂ ಉಂಟು.

ಹಾಗೆಂದು ಈ ವಿಧಾನದಲ್ಲಿ ಇಳುವರಿಯೇನೂ ಕಡಿಮೆಯಾಗುವುದಿಲ್ಲ. ರೆಡ್ಡಿಯವರು ಅರ್ಧ ಎಕರೆ ಗದ್ದೆಗೆ ಕೇವಲ 500 ಗ್ರಾಂ ಬಿತ್ತನೆ ಬೀಜವನ್ನು 30-30 ಸೆಂ.ಮೀ. ಅಂತರದಲ್ಲಿ ಬಿತ್ತಿ 18.5 ಕ್ವಿಂಟಾಲ್ ಬತ್ತ ಪಡೆದಿದ್ದಾರೆ. ವಿವಿಧ ದೇಶಗಳಲ್ಲಿನ ರೈತರು 'ಶ್ರೀ' ವಿಧಾನದಲ್ಲಿ ಇಂಥ ಬದಲಾವಣೆಗಳನ್ನು ಸ್ವತಃ ಅಳವಡಿಸಿಕೊಂಡು ಅಧಿಕ ಇಳುವರಿ ಪಡೆದಿರುವುದನ್ನು ಮಡಗಾಸ್ಕರ್ ಪದ್ಧತಿ ಜನಪ್ರಿಯಗೊಳಿಸಿರುವ 'ಟೆಫಿ ಸೈನಾ'ದ ವಿಜ್ಞಾನಿ ನಾರ್ಮನ್ ಅಪ್‌ಹಾಫ್ ದಾಖಲಿಸಿದ್ದಾರೆ.



ಹತ್ತಿ ಬೆಳೆಯ ಕೀಟಬಾಧೆಗೆ ಔಷಧಿಯಾಗಬಲ್ಲ ಬೆಂಡೆ, ಜೋಳದ ಗಿಡಗಳು

ಶಿವಮೊಗ್ಗದ ಕುಂಸಿಯ ರೈತ ಸಂಪರ್ಕ ಕೇಂದ್ರದ ಇಬ್ಬರು ಸರಕಾರಿ ನೌಕರರು ಒಂದು ಅಪೂರ್ವ ಸಾಧನೆ ಮಾಡಿದ್ದಾರೆ. ಇವರು ಕಲಿಸಿದ ಪಾಠ ಎಲ್ಲರಿಗೂ ಅರ್ಥವಾದರೆ ನಮ್ಮ ರೈತರು ಮೊನ್ಸಾಂಟೊ ಕಂಪನಿಯ 'ಬಿಟಿ' ಹತ್ತಿಯ ಹತ್ತಿರವೂ ಸುಳಿಯಬೇಕಾಗಿಲ್ಲ.

ಹತ್ತಿ ಹುಳು ಹತ್ತಿಕ್ಕಲು ಇಲ್ಲಿದೆ ಹೊಸ ಬಗೆ

'**ಹ**ತ್ತಿ ಬೆಳೆದ ರೈತ ಚಿಕ್ಕಿ ಬಿಕ್ಕಿ ಅತ್ತ' ಎಂಬ ಹೊಸ ಗಾದೆ ಕೇಳಿದ್ದೀರಾ? ಹತ್ತಿಗೆ ತಗಲುವ ಕೀಟ-ಹುಳುಗಳನ್ನು ಕೊಲ್ಲಲು ಎಷ್ಟೆಲ್ಲ ಬಗೆಯ ಘೋರ ವಿಷಗಳು ಬಳಕೆಯಾಗುತ್ತಿವೆ. ಕೊನೆಗೂ ಕೀಟಗಳೇ ಗೆದ್ದಾಗ ಅದೇ 'ಔಷಧ'ವೇ ರೈತನನ್ನೂ ಕೊಲ್ಲುತ್ತದೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ವಿಷಗಳಲ್ಲಿ ಶೇಕಡಾ 60ರಷ್ಟು ಹತ್ತಿ ಬೆಳೆಗೇ ಸಿಂಪರಣೆಯಾಗುತ್ತವೆ. ಆದರೂ ನಿಯಂತ್ರಣಕ್ಕೆ ಬಾರದೆ ಈಗ 'ಬಿಟಿ ಹತ್ತಿ' ಎಂಬ ವಿವಾದಗ್ರಸ್ತ ಹೊಸ ತಳಿಯ ಸೃಷ್ಟಿಯಾಗಿದೆ. ಅದರ ನಕಲಿ ತಳಿಗಳೂ ಬಂದಿವೆ. ಅಂತೂ ಈ ಹುಳಗಳ ಕಾಟದಿಂದ ರೈತನಿಗೆ ಸುಲಭದಲ್ಲಿ ಮುಕ್ತಿ ಇಲ್ಲವಾಗಿದ್ದರಿಂದಲೇ ಈ ಹೊಸ ಗಾದೆ ಹುಟ್ಟಿಕೊಂಡಿದೆ.

ಆದರೆ ಈಗ ಈ ಗಾದೆಯನ್ನು ಬದಿಗಿಡಿ. ಹತ್ತಿಗೆ ಒಮ್ಮೆ ಕೂಡ ವಿಷ ಸಿಂಪಡಿಸದೆ ಬೆಳೆಯಬಹುದೆಂದು ಶಿವಮೊಗ್ಗ ಜಿಲ್ಲೆಯ ಕುಂಸಿಯ 'ರೈತ ಸಂಪರ್ಕ ಕೇಂದ್ರ'ದ ಅಧಿಕಾರಿಗಳಾದ ಟಿ.ಎಂ. ನಾಗರಾಜ್ ಮತ್ತು ಟಿ. ಅನಂತ್ ಭಟ್ ರೈತರಲ್ಲಿ ಅರಿವು ಮೂಡಿಸುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಈಗಾಗಲೇ ಕೆಲವು ರೈತರು ಯಶಸ್ವಿಯಾಗಿ ಮತ್ತು ಉತ್ತಮ ಗುಣಮಟ್ಟದ ಹತ್ತಿ ಬೆಳೆದಿದ್ದಾರೆ.

ಈ ಪದ್ಧತಿಯಲ್ಲಿ ಹತ್ತಿ ಬೆಳೆಯ ಸುತ್ತ (ಬೇಲಿ ರೂಪದಲ್ಲಿ) ಬೆಂಡೆಕಾಯಿ, ಚೆಂಡು ಹೂ, ಜೋಳ ಅಥವಾ ಅಲಸಂದಿ ಗಿಡಗಳನ್ನು ಬೆಳೆಯಬೇಕು. 8-10 ಹತ್ತಿ ಸಾಲುಗಳ ನಡುವೆ ಕೂಡ ಇದೇ ಬೆಳೆಗಳನ್ನು ಬೆಳೆಯಬೇಕು. ಹತ್ತಿಯ ಹುಳುಗಳು ಈ ಗಿಡಗಳ ಕಡೆ ಬರುತ್ತವೆ. ಈ ಬೆಳೆಗಳಲ್ಲಿ ಇರುವ ಕೆಲವೊಂದು ಕ್ರಿಮಿಕೀಟಗಳು ಹತ್ತಿ ಬೆಳೆಯಲ್ಲಿ ಇರುವ ಹುಳುಗಳನ್ನು ತಿನ್ನುತ್ತವೆ. 'ಇದರಿಂದ ಸಹಜವಾಗಿ ಹತ್ತಿ ಬೆಳೆ ಹುಳುಗಳಿಂದ ಮುಕ್ತವಾಗುತ್ತದೆ' ಎನ್ನುತ್ತಾರೆ, ಗ್ರಾಮ ಸೇವಕ ಟಿ.ಎಂ. ನಾಗರಾಜ್.

ಕಾಯಿಕೊರಕ, ಹೇನು ಮತ್ತು ಇವುಗಳ ಮೊಟ್ಟೆಯನ್ನು ಜೇಡ, ಕ್ರೈಸೋಪರ್ಲಾ, ಟ್ರೈಕೋಗ್ರಾಮಾ ಮತ್ತು ಗುಲಗಂಜಿ ಕೀಟಗಳು ತಿಂದು ನಾಶ ಮಾಡುತ್ತವೆ. ಆದರೆ ರೈತರು ಹತ್ತಿಗೆ ವಿಷ ಸಿಂಪಡಿಸಿದರೆ 'ಮೊದಲು ಉಪಕಾರಿ ಕೀಟಗಳು ಸಾಯುತ್ತವೆಯೇ ವಿನಾ ಹಾನಿಕಾರಕ ಹುಳುಗಳಲ್ಲ' ಎನ್ನುತ್ತಾರೆ ಅವರು. ಏಕೆಂದರೆ ಕಾಂಡ ಕೊರಕ ಹುಳು, ಗಿಡದ ಕಾಂಡದ ಒಳಭಾಗದಲ್ಲಿ ಸುರಕ್ಷಿತವಾಗಿರುತ್ತದೆ. ಸಿಂಪಡಿಸಿದ ವಿಷ ಗಿಡದ ಮೇಲ್ಭಾಗದಲ್ಲಿ ಇರುತ್ತದೆ.

ಉಪಕಾರಿ ಕೀಟಗಳಿಗೆ ಆಶ್ರಯ ಕೊಡಿ. ಜತೆಗೆ ಸಾಧ್ಯವಿದ್ದರೆ ಜೇಡಿ ಮಣ್ಣನ್ನು ಗಟ್ಟಿಯಾಗಿ ಕಲಸಿ ಹತ್ತಿ ಗಿಡದ ಕಾಂಡದಲ್ಲಿ ಕೊರಕ ಹುಳು ಮಾಡಿರುವ ತೂತನ್ನು ಮುಚ್ಚಿ. ಹುಳು ಉಸಿರುಗಟ್ಟಿ ಸಾಯುತ್ತದೆ. ಇದರ ಜೊತೆಗೆ ಮತ್ತೊಂದು ವಿಧಾನ ಎಂದರೆ ಮುಂಜಾನೆ ಈ ಹುಳು ಹತ್ತಿ ಗಿಡ ಎಲೆ ಮೇಲೆ ಬಂದು ಕೂತಾಗ ಕೈಯಿಂದ ಹಿಡಿದು ಸಾಯಿಸಿ ಎನ್ನುತ್ತಾರೆ ಟಿ.ಎಂ. ನಾಗರಾಜ್.

ಔಷಧಿ ಸಿಂಪಡಣೆ ರೈತರಿಗೆ ಆರ್ಥಿಕ ಹೊರೆ ಮಾತ್ರವಲ್ಲ ಇದರಿಂದ ಹತ್ತಿಯ ಗುಣಮಟ್ಟ ಮತ್ತು ಮಣ್ಣಿನ ಗುಣಮಟ್ಟ ಕಡಿಮೆಯಾಗುತ್ತದೆ. 'ನಾವು ರೈತರಿಗೆ ಈ ಹೊಸ ಪದ್ಧತಿಯ ಶಿಕ್ಷಣ ನೀಡಿ ಅವರು ಒಮ್ಮೆಯೂ ಔಷಧಿ ಸಿಂಪಡಿಸದೆ ಹತ್ತಿ ಬೆಳೆಯುವುದನ್ನು ಕಲಿಸಿದ್ದೇವೆ. ಇವರಲ್ಲಿ ರಾಗಿ ಹೊಸಹಳ್ಳಿಯ ರೈತ ರುದ್ರೇಶ್ ಗರಿಷ್ಠ ಪ್ರಮಾಣದ (ಎಕರೆಗೆ 15 ಕ್ವಿಂಟಲ್) ಹತ್ತಿ ಬೆಳೆದಿದ್ದು ಅದರ ಗುಣಮಟ್ಟವೂ ಉತ್ತಮವಾಗಿದೆ' ಎನ್ನುತ್ತಾರೆ ಗ್ರಾಮಸೇವಕರಾದ ಟಿ. ಅನಂತ್‌ಭಟ್.

ಈ ಪದ್ಧತಿಯಂತೆ ಸುಮಾರು 50 ಜನ ರೈತರ ಹತ್ತಿ ಬೆಳೆ ಬೆಳೆದಿದ್ದಾರೆ. ಈ ಹಿಂದೆ ಎಕರೆಗೆ 10,000 ರೂ. ಖರ್ಚು ಮಾಡುತ್ತಿದ್ದ ರೈತರು ಈಗ ಅದೇ ಎಕರೆಗೆ ಆರೇಳು ಸಾವಿರ ಮಾತ್ರ ಖರ್ಚು ಮಾಡುತ್ತಾರೆ. ಆದರೆ ಇಳುವರಿಯಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಅದು 6-7 ಕ್ವಿಂಟಲ್ ಪ್ರಮಾಣದಲ್ಲಿ ಇದೆ ಎಂದು ಅವರು ವಿವರಿಸುತ್ತಾರೆ.

ಈ ಇಬ್ಬರು ಸೇವಕರು ಈ ಕುರಿತು ತಮ್ಮ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ರೈತರಿಗೆ ವಾರಕ್ಕೆ ಒಂದು ದಿನದಂತೆ 20 ದಿನಗಳ ತರಬೇತಿ ತರಗತಿಯನ್ನು 'ಸಮಗ್ರ ಪೀಡೆ ನಿರ್ವಹಣೆ' ಎಂಬ ಕಾರ್ಯಕ್ರಮದ ಅಡಿಯಲ್ಲಿ ನಡೆಸುತ್ತಿದ್ದಾರೆ.

ಈಗಾಗಲೇ ಶಿವಮೊಗ್ಗ ಜಿಲ್ಲೆಯ ಚಿನ್ನಮನೆ, ರಾಗಿ ಹೊಸಹಳ್ಳಿ, ಚಿಕ್ಕಮರಸ, ಹುಬ್ಬರಹಳ್ಳಿ, ಚೋರಡಿ, ತುಪ್ಪರುಗಳಲ್ಲಿ ಇಂತಹ ತರಬೇತಿ ಶಿಬಿರ ನಡೆಸಿರುವ ಇವರು ಈಗ ಸುಡೂರು, ರೇಚಿಕೊಪ್ಪ, ಚಿಕ್ಕದಾನವಂದಿ, ದೊಡ್ಡದಾನ ವಂದಿ, ಬಾಳೆಕೊಪ್ಪ, ಒಡೆಯರ್ ಕೊಪ್ಪಗಳಲ್ಲಿ ತರಬೇತಿ ಶಿಬಿರವನ್ನು ನಡೆಸುತ್ತಿದ್ದಾರೆ.

ಇವರು ರೈತರಿಗೆ ವಿಷ ಸಿಂಪಡಣೆ ಇಲ್ಲದೆ ಹತ್ತಿ ಬೆಳೆಯುವ ತರಬೇತಿ ನೀಡಿದ್ದಾರೆ. ಅಷ್ಟೇ ಅಲ್ಲ, ಇನ್ನೂ ಒಂದು ಉತ್ತಮ ಕೆಲಸ ಮಾಡಿದ್ದಾರೆ. ಕೆಲವು ರೈತರನ್ನೇ ಈ ಬಗೆಯ ಶಿಕ್ಷಣಕ್ಕಾಗಿ ತರಬೇತಿ ಕೂಡ ಮಾಡಿದ್ದಾರೆ. ಇಂಥ 'ಕೃಷಿಶಿಕ್ಷಕರು' ಬೇರೆ ಹಳ್ಳಿಗಳಿಗೆ ಹೋಗಿ ಅಲ್ಲಿನ ರೈತರಿಗೆ ಅರಿವು ಮೂಡಿಸುವಂತೆ ವ್ಯವಸ್ಥೆ ಮಾಡಿದ್ದಾರೆ.

ಶಾಭಾಸ್ ಎನ್ನೋಣವೇ?

ಚಿತ್ರ- ಲೇಖಕ

■ ಎ.ಜಿ. ರಾಘವೇಂದ್ರಗೌಡ



ರೈತರಿಗೆ ಮಾರ್ಗದರ್ಶನ ನೀಡುತ್ತಿರುವ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು

ಸರಳ ತಂತ್ರಕ್ಕೆ ಹೇರಳ ಬಾಳೆ



ದಷ್ಟಪುಷ್ಟ ಬಾಳೆಗೊನೆಯೊಂದಿಗೆ ಕೃಷಿಕ ರಮೇಶ್

'**ನೆ**ಲಕ್ಕೆ ಸ್ವಲ್ಪ ಅಥವಾ ಏನೂ ಕೊಡದೇ ಹೆಚ್ಚಿನ ಬೆಳೆ ತೆಗೆಯೋದು ಒಂದು ದಂಧೆ ಇದ್ದ ಹಾಗೆ. ನನ್ನ ವಿಧಾನ ಬೇರೆ. ಮೊದಲು ಅದಕ್ಕೆ ಬೇಕಾದ 'ಆಹಾರ' ಕೊಡಿ... ಆಮೇಲೆ ನೋಡಿ ಜಮೀನು ಹೇಗೆ ಅದನ್ನು ವಾಪಸ್ ಕೊಡ್ತದೆ ಅಂತ...'

ದೇವನಹಳ್ಳಿಯ ಶಿವನಾಪುರ ರಮೇಶ್ ಎರಡು ದಶಕಗಳಿಂದ ಅನುಸರಿಸಿಕೊಂಡು ಬಂದ ಸಿದ್ಧಾಂತ ಇದು. ಭೂಮಿಗೆ ಸಾಕಷ್ಟು ಪ್ರಮಾಣದ ಗೊಬ್ಬರ ಅಥವಾ ಪೋಷಕಾಂಶ ನೀಡದೇ ಅಧಿಕ ಇಳುವರಿ ಪಡೆಯುವುದೆಂದರೆ- ಅದು ದರೋಡೆ ಎಂದೇ ಅವರ ಭಾವನೆ. ಇಂಥ ಪ್ರವೃತ್ತಿಯಿಂದ ಕೆಲವೇ ವರ್ಷಗಳಲ್ಲಿ ನೆಲ ಬರಡಾದೀತು ಎಂಬ ಎಚ್ಚರಿಕೆಯನ್ನು ಅವರು ನೀಡುತ್ತಾರೆ.

ಕಳೆದ ವರ್ಷದ ಪ್ರತಿಷ್ಠಿತ ಎಂ.ಎಚ್.ಮರೀಗೌಡ ತೋಟಗಾರಿಕಾ ಪ್ರಶಸ್ತಿ ರಮೇಶ್‌ಗೆ ಸಂದಿದೆ. ಅವರ ತೋಟ ಬರೀ ಎಡೂವರೆ ಎಕರೆ. ಅದರಲ್ಲೇ ವಿವಿಧ ಪ್ರಯೋಗಗಳು. ಈ ಬಾರಿ ಬಾಳೆ ಕೃಷಿ ಮಾಡಿ ಲಾಭ ಮಾಡಿದ್ದು ಇವಕ್ಕೆ ಸೇರ್ಪಡೆ.

ಬಾಳೆಗೆ ರೋಗ ಹೆಚ್ಚು; ಹಾಗಾಗಿ ಖರ್ಚು ಅಧಿಕ. ಆದರೆ ರೋಗ ಏಕೆ ಬರುತ್ತದೆ? ಎಂಬ ಪ್ರಶ್ನೆ ಮುಂದಿಟ್ಟುಕೊಂಡು ಅದಕ್ಕೆ ಮುಂಜಾಗ್ರತಾ ಕ್ರಮ ಅನುಸರಿಸಿರುವ ಅವರಿಗೆ ಈಗ ಯಶಸ್ಸು ದೊರಕಿದೆ. ನೆಲದ ಫಲವತ್ತತೆಯನ್ನು ಅಧಿಕಗೊಳಿಸುವ ಮೂಲಕ. ಕೇವಲ ನಾಲ್ಕು ಗುಂಟೆ (ಎಕರೆಯ 10ನೇ ಒಂದು ಭಾಗ)ದಲ್ಲಿ 160 ಬಾಳೆ ಗಿಡ ಬೆಳೆಸಿ 35 ಸಾವಿರ ರೂಪಾಯಿ ಆದಾಯದ ನಿರೀಕ್ಷೆಯಲ್ಲಿದ್ದಾರೆ.

ಚಿಕ್ಕ ಕಾಲುವೆಯಲ್ಲಿ ತೆಂಗಿನ ಗರಿ, ಕೊಟ್ಟಿಗೆ ಗೊಬ್ಬರ, ಬೇವು- ಹೊಂಗೆ ಹಿಂಡಿ ಹಾಕಿದ ರಮೇಶ್ ಅದಕ್ಕೊಂಚ ನೀರು ಹರಿಸಿ, ಹದಿನೈದು ದಿನಗಳ ತನಕ ಕೊಳೆಯಲು ಬಿಟ್ಟರು. ಬಳಿಕ ಅದರಲ್ಲಿ 'ರೋಬಸ್ಟಾ' ಬಾಳೆಕಂದು ನೆಟ್ಟರು. ಸಹಜವಾಗಿಯೇ ಬಾಳೆಗೆ ನೀರು ಅಧಿಕ ಬೇಕಾಗಿದ್ದರೂ ಅದಕ್ಕೂ ಅವರು ಉಪಾಯ ಮಾಡಿದರು. ತೆಂಗಿನ ಗರಿಗಳ ಹೊದಿಕೆ(ಮಲ್ಚಿಂಗ್)ಯನ್ನು ಗಿಡಗಳ ಬುಡಕ್ಕೆ ಹಾಕಿದ್ದರಿಂದ, ನೀರಿನ ಅಗತ್ಯ ಕಡಿಮೆಯಾಯಿತು. ಈ ಮಧ್ಯೆ ಬಾವಿಯಲ್ಲಿ ನೀರು ಬತ್ತಿಹೋದ ಪರಿಣಾಮ, ಬೇಸಿಗೆಯಲ್ಲಿ 10 ದಿನಕ್ಕೊಮ್ಮೆ ನೀರು ನೀಡಿದರು; ಯಾವುದೇ ಗಿಡ ಒಣಗದೇ ಇರುವುದನ್ನು ಕಂಡು ಅವರಿಗೇ ಅಚ್ಚರಿ! ರಾಸಾಯನಿಕ ಸುರಿಯುವ ಬಾಳೆತೋಟಗಳಿಗೆ ಸುಳಿ ಬೆಳವಣಿಗೆ ಕುಂಠಿತ, ಮಂಡಾಣು, ಪನಾಮಾ ರೋಗಗಳ ಹಾವಳಿ ಹೆಚ್ಚು. ಆದರೆ ಇವರ ತೋಟಕ್ಕೆ ಮಾತ್ರ ಅವಾವುದರ ಸೋಂಕೇ ಇಲ್ಲ. ಬಾಳೆ ಕಾಂಡ, ದಪ್ಪನಾದ ಎಲೆ ಎತ್ತರದ ಗೊನೆಗಳು ನೋಡುಗರಲ್ಲಿ ಅಚ್ಚರಿ ಮೂಡಿಸುತ್ತವೆ.

ಈ ಬಾರಿ ಮೊದಲ ಇಳುವರಿಯಲ್ಲಿ ಅದು ಬಹಳ ಹೆಚ್ಚು ಇಳುವರಿ- ಅಂದರೆ ಸುಮಾರು 35 ಸಾವಿರ ರೂ- ಬರುವ ನಿರೀಕ್ಷೆ ಇದೆ. ಮುಂದಿನ ವರ್ಷ ಅದು ಹೆಚ್ಚಾಗುತ್ತದೆ. ಸಾವಯವ ಕೃಷಿಯಲ್ಲಿ ಖರ್ಚು ಅಧಿಕ ಎನ್ನುವ ಮಾತಿಗೆ ರಮೇಶ್ ಸಮ್ಮತಿಸುತ್ತಾರೆ.

'ಆದರೆ ಅದು ಆರಂಭದಲ್ಲಿ ಮಾತ್ರ. ಒಳಸುರಿ (inputs)ಗಳ ಪ್ರಮಾಣ ನಂತರ ಕಡಿಮೆಯಾಗುತ್ತವೆ. ನಾವು ನೆಲಕ್ಕೆ ಕೊಡುವ ಗೊಬ್ಬರವೇ ಅದಕ್ಕೆ ಸಾಕು. ಇಳುವರಿ ಅಧಿಕ ಬೇಕೆಂದರೆ ಮತ್ತೊಂದಷ್ಟು ಪೋಷಕಾಂಶ ನೀಡಬೇಕು' ಎಂದೂ ಸ್ಪಷ್ಟಪಡಿಸುತ್ತಾರೆ.

'ಬೇರೆ ತೋಟಗಳಲ್ಲಿ ಸಮಯಕ್ಕೆ ಸರಿಯಾಗಿ ನೀರು, ನಾಲ್ಕಾರು ಬಾರಿ ಕ್ರಿಮಿನಾಶಕ ಸಿಂಪಡಿಸದೇ ಹೋದರೆ ಗಿಡಗಳು ಸತ್ತೇ ಹೋಗುತ್ತವೆ. ಆದರೆ ನನ್ನ ಗಿಡ ನೋಡಿ. ಹೆಚ್ಚಿನ ಆರೈಕೆ ಇಲ್ಲದೇ ಎಷ್ಟೊಂದು ಶಕ್ತಿ ಪಡೆದಿವೆ. ಅವು ಆರೋಗ್ಯವಾಗಿರಲು ಸೂಕ್ತ ವಾತಾವರಣ ಕಲ್ಪಿಸಿದೆ. ನೆಲಕ್ಕೆ ಚೈತನ್ಯ ನೀಡಿದೆ. ಇವೇ ಕಾರಣ. ಅಷ್ಟೇ' ಎನ್ನುತ್ತಾರೆ ರಮೇಶ್.

ಸೆಪ್ಟೆಂಬರ್ ಕೊನೆಯ ವಾರದಲ್ಲಿ ಬಾಳೆಗೊನೆಗಳ ಕೊಯ್ಲು ನಡೆಯಲಿದೆ. ಒಂದೊಂದು ಗೊನೆಯನ್ನು ಇಬ್ಬರು ಹೊತ್ತು ಸಾಗುವ ಪರಿ ನೋಡಬೇಕೆಂದರೆ, ರಮೇಶ್ ಅವರ ತೋಟಕ್ಕೆ ಭೇಟಿ ನೀಡಬಹುದು. ದೂರವಾಣಿ: 98455 29324

ಚಿತ್ರ- ಲೇಖಕ

■ ಆನಂದತೀರ್ಥ ಪ್ಯಾಟಿ

ರಾಸಾಯನಿಕಗಳನ್ನು ಸುರಿಯದೆ ನೆಲದ ಫಲವತ್ತತೆ ಹೆಚ್ಚಿಸುವ ಪ್ರಯೋಗ ಕೈಗೊಂಡ ದೇವನಹಳ್ಳಿಯ ಕೃಷಿಕ ರಮೇಶ್, ನಾಲ್ಕು ಗುಂಟೆ ಭೂಮಿಯಲ್ಲಿ ನೆಟ್ಟ ಬಾಳೆ ತೋಟದ ಮೊದಲ ಇಳುವರಿಯಿಂದ ಮೂವತ್ತೈದು ಸಾವಿರ ರೂಪಾಯಿ ಆದಾಯ ಪಡೆಯಲು ಸಜ್ಜಾಗಿದ್ದಾರೆ. 'ಸುಲಿದ ಬಾಳೆಯ ಹಣ್ಣಿನಂದದಿ...' ಎಂಬ ಕವಿವಾಣಿಯನ್ನು ನೆನಪಿಸುವ ಈ ಯಶಸ್ಸು ಸಾಧ್ಯವಾಗಿದ್ದು ಹೇಗೆ?

ವಾಹನಗಳಿಗೆ ಕ್ಸೆನಾನ್ ದೀಪ ಬೆಳಕಿ

ರಾತ್ರಿ ನಿರ್ಜನ ರಸ್ತೆಗಳಲ್ಲಿ ಪ್ರಯಾಣ ಹೊರಟಾಗ ಧುತ್ತನೆ ಮನುಷ್ಯರೋ, ಕಾಡು ಪ್ರಾಣಿಗಳೋ ಎದುರಾಗಿ ಸಂಭವಿಸುವ ಅಪಘಾತಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ನಗರ ಪ್ರದೇಶವನ್ನು ಬಿಟ್ಟು ಹೊರ ಬಂದರಂತೂ ಹೆದ್ದಾರಿಯಲ್ಲಿನ ರಸ್ತೆ ಸೂಚನಾ ಫಲಕಗಳನ್ನು ನಮ್ಮ ವಾಹನಗಳ ಬೆಳಕು ತಲುಪುವುದೇ ಇಲ್ಲ. ಘಟ್ಟ ಪ್ರದೇಶಗಳಲ್ಲಿ ಹಠಾತ್ತನೆ ಎದುರಾಗುವ ತಿರುವುಗಳನ್ನು ಊಹಿಸಲಾಗದೇ ಪಾತಾಳಕ್ಕೆ ವಾಹನ ಬಿಟ್ಟು ಸತ್ತವರೆಷ್ಟೋ? - ಹೀಗೆ ಅಪಘಾತದ ವಿಷಯದಲ್ಲಿ ವಾಹನಗಳ ಹೆಡ್‌ಲೈಟ್‌ಗಳು ಪ್ರಮುಖವಾದ ಪಾತ್ರ ವಹಿಸುತ್ತವೆ.

ವಾಹನಗಳಲ್ಲಿ ಎರಡು ಬಗೆಯ ದೀಪಗಳನ್ನು ಬಳಸುತ್ತಾರೆ. ನಮ್ಮೆಲ್ಲರ ಮನೆಗಳಲ್ಲಿ ಬಳಸುವ ಮಾಮೂಲು ಬಲ್ಬ್‌ಗಳನ್ನು ಹೋಲುವ ಉಷ್ಣ ತಂತು ತಂತ್ರಜ್ಞಾನದ ದೀಪಗಳು ಮತ್ತು ಅವುಗಳಲ್ಲೇ ಸುಧಾರಿತ ಹಾಲೋಜನ್ ದೀಪಗಳು. ಈ ಎರಡೂ ದೀಪಗಳಲ್ಲಿ ಇರುವ ಬೆಳಕು ತಂತಿಯ (ಫಿಲಮೆಂಟ್) ಮೂಲಕ ವಿದ್ಯುತ್ ಹರಿದು, ಆ ತಂತಿಯು ಕಾದು ಬೆಳಕು ಉತ್ಪತ್ತಿಯಾಗುತ್ತದೆ. ಆಗ ಬೆಳಕಿನೊಂದಿಗೆ ಶಾಖವೂ ಉತ್ಪತ್ತಿಯಾಗುತ್ತದೆ. ಆದರೆ ಸ್ವಲ್ಪ ವಿದ್ಯುತ್ ಇಲ್ಲಿ ಶಾಖ ಉತ್ಪಾದನೆಗಾಗಿ ವ್ಯಯವಾಗುವುದರಿಂದ ಬೆಳಕಿನ ಪ್ರಮಾಣ ಕಡಿಮೆಯಾಗಿರುತ್ತದೆ. ಈಗ ನಮ್ಮ ವಾಹನಗಳಲ್ಲಿ ಬಳಕೆಯಾಗುವ ದೀಪಗಳು ಕಣ್ಣು ಕೋರೈಸುವ ಬೆಳಕನ್ನು ಹೊಮ್ಮಿಸಿದರೂ ಅದರ ವ್ಯಾಪ್ತಿ ಕಡಿಮೆ. ಅದರಿಂದ ದೂರಕ್ಕೆ ತಲುಪದ ಬೆಳಕು ಹಲವು ಅಪಘಾತಗಳಿಗೆ ಕಾರಣವಾಗಿದೆ.

ಇಷ್ಟು ದಿನ ಕೇವಲ ಕ್ರೀಡಾಂಗಣಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದ, ಸೂರ್ಯನನ್ನೇ ನಾಚಿಸುವ ದೀಪಗಳು ಈಗ ರಸ್ತೆಗಳನ್ನೂ ಬೆಳಗಲಿವೆ. ಹೈ ಇಂಟೆನ್ಸಿಟಿ ಡಿಸ್ಚಾರ್ಜ್ (ಎಚ್‌ಐಡಿ) ಹೆಸರಿನ ದೀಪಗಳನ್ನು ಜರ್ಮನಿಯ ಒಸ್ರಾಮ್ ಕಂಪನಿಯ ವಿಜ್ಞಾನಿಗಳು ಈ ದೀಪಗಳನ್ನು ಪ್ರಪ್ರಥಮವಾಗಿ ಜೋಡಿಸಿದ್ದಾರೆ.

ನಾವು ಹಗಲು- ರಾತ್ರಿ ಅಥವಾ ಹೊನಲು ಬೆಳಕು ಕ್ರೀಡೆಗಳನ್ನು ದೂರದರ್ಶನದಲ್ಲಿ ಅಥವಾ ನೇರವಾಗಿ ಕ್ರೀಡಾಂಗಣಗಳಲ್ಲಿಯೇ ವೀಕ್ಷಿಸಿದ್ದೇವೆ. ಸಂಜೆಯಾದ ಮೇಲೆ ಕ್ರೀಡಾಂಗಣದಲ್ಲಿ ಹೊತ್ತಿಸುವ ದೀಪಕ್ಕೂ ಬೆಳಗಿನ ಸೂರ್ಯನ ಬೆಳಕಿಗೂ ಅಷ್ಟಾಗಿ ವ್ಯತ್ಯಾಸವೇ ಇರುವುದಿಲ್ಲ. ನೆಲದ ಮೇಲೆ ಬೀಳುವ ನೆರಳುಗಳು ಮಾತ್ರ ನಮಗೆ ವಾಸ್ತವವನ್ನು ನೆನಪಿಸುತ್ತಿರುತ್ತವೆ. ಈ ರೀತಿಯಾಗಿ ಸೂರ್ಯನನ್ನೇ ನಾಚಿಸುವ ದೀಪಗಳು ಈಗ ನಮ್ಮ ರಸ್ತೆಗಳನ್ನೂ ಬೆಳಗಲಿವೆ. ಜರ್ಮನಿಯ ಒಸ್ರಾಮ್ ಕಂಪನಿಯ ವಿಜ್ಞಾನಿಗಳು ಈ ದೀಪಗಳನ್ನು ವಾಹನಗಳಲ್ಲಿ ಪ್ರಪ್ರಥಮವಾಗಿ ಜೋಡಿಸಿದ್ದಾರೆ.

ಹೈ ಇಂಟೆನ್ಸಿಟಿ ಡಿಸ್ಚಾರ್ಜ್ (ಎಚ್‌ಐಡಿ) ಎಂಬ ಹೆಸರಿನ ಈ ದೀಪಗಳು ಇಷ್ಟು ದಿನ ಕೇವಲ ಕ್ರೀಡಾಂಗಣಗಳಲ್ಲಿ ಮಾತ್ರ ಬಳಕೆಯಾಗುತ್ತಿದ್ದವು. ಇವುಗಳಿಗೆ ಕ್ಸೆನಾನ್ ದೀಪಗಳು ಎಂದೂ ಕರೆಯುತ್ತಾರೆ.

ಸುಲಭ ತಂತ್ರಜ್ಞಾನ

ಈ ಕ್ಸೆನಾನ್ ದೀಪ ಸುಲಭವಾದ ತಂತ್ರಜ್ಞಾನವನ್ನೇ ಹೊಂದಿದೆ. ನಮ್ಮ ಮನೆಗಳಲ್ಲಿ ಬಳಕೆಯಾಗುವ ಟ್ಯೂಬ್ ಲೈಟ್‌ನ ಹಾಗೆಯೇ ಇಲ್ಲಿ ಬೆಳಕು ಉತ್ಪತ್ತಿಯಾಗುವುದು. ಇಲ್ಲಿ ಬಲ್ಬ್‌ನ ಬುರುಡೆಯ ಒಳಗೆ ಕ್ಸೆನಾನ್ ಅನಿಲ ತುಂಬಿ ಮುದ್ರೆ ಹಾಕಿರುತ್ತಾರೆ (ಸೀಲ್ ಮಾಡಿರುತ್ತಾರೆ.) ಟ್ಯೂಬ್ ಲೈಟ್‌ನ ಹಾಗೆಯೇ ಇಲ್ಲಿ ಆನೋಡ್ ಮತ್ತು ಕ್ಯಾತೋಡ್ ಎಲೆಕ್ಟ್ರೋಡ್‌ಗಳ ನಡುವೆ ವಿದ್ಯುತ್ ಹರಿದು ಕ್ಸೆನಾನ್ ಅನಿಲದ ಅಣು ವಿಭಜನೆಯಾಗಿ ಬೆಳಕು ಉತ್ಪತ್ತಿಯಾಗುತ್ತದೆ. ಆಗ ಉತ್ಪತ್ತಿಯಾಗುವ ಬೆಳಕು ಅಪಾರ. ಸಾಮಾನ್ಯವಾಗಿ ನಮ್ಮ ಸಾಧಾರಣ ಬಲ್ಬ್‌ಗಳಲ್ಲಿ ಹಳದಿ ಬಣ್ಣದ ಬೆಳಕು ಹೊರ ಹೊಮ್ಮುತ್ತದೆ. ಈ ಬಲ್ಬಿನಲ್ಲಿ ಬೆಳಕಿನ ತಂತಿಯೇ ಇಲ್ಲವಾದ್ದರಿಂದ (ಫಿಲಮೆಂಟ್) ಬಲ್ಬ್ ಕಾಯುವುದೇ ಇಲ್ಲ. ಆದ್ದರಿಂದ ಇಲ್ಲಿ ವಿದ್ಯುತ್ ಶಾಖಕ್ಕಾಗಿ ವ್ಯಯವಾಗುವುದೇ ಇಲ್ಲ.

ಸದ್ಯಕ್ಕೆ ಕ್ಸೆನಾನ್ ದೀಪಗಳಿಗೆ ಸರಿಸಮಾನವಾದ ದೀಪ ಮತ್ತೊಂದಿಲ್ಲ. ಈ ದೀಪದ ವಿಶೇಷತೆ ಏನೆಂದರೆ ಇದು ನಮ್ಮ ಹಾಲೋಜನ್ ದೀಪಗಳಿಗಿಂತ ಮೂರು ಪಟ್ಟು ಹೆಚ್ಚು ಬೆಳಕನ್ನು ಹೊರ ಸೂಸುತ್ತದೆ. ವಿಜ್ಞಾನಿಗಳ ಪ್ರಕಾರ ಇದರ ಬೆಳಕು ಹಗಲಿನ ಬೆಳಕಿಗೆ ಹತ್ತಿರವಾದದ್ದು. ಇಂದಿನ ದೀಪಗಳು ಬೇಗನೇ ಸುಟ್ಟು ಹೋಗುವುದು ಬಹು ಮುಜುಗರದ ಸಂಗತಿ. ಆದರೆ ವಿಜ್ಞಾನಿಗಳು ಹೇಳುವ ಹಾಗೆ ಹೊಸ ಕಾರು ಖರೀದಿಸಿ ಅದಕ್ಕೆ ಕ್ಸೆನಾನ್ ದೀಪ ಜೋಡಿಸಿದಾಗ, ಕಾರನ್ನು ಗುಜರಿಗೆ ಹಾಕಿದ ನಂತರವೂ ಈ ದೀಪವನ್ನು ಬಳಸಬಹುದು! ಅಂದರೆ ಹಳೆಯ ಕಾರಿನ ದೀಪವನ್ನು ಬೇರ್ಪಡಿಸಿ ಹೊಸ ಕಾರಿಗೆ ಜೋಡಿಸಿಕೊಳ್ಳುವುದು. ಈ ದೀಪ ದೀರ್ಘ ಕಾಲ ಉಳಿಯುತ್ತದೆ.

ಇಂದಿನ ವಾಹನಗಳಲ್ಲಿ ಬಳಸುವ ದೀಪಗಳು ಶಕ್ತಿಗಾಗಿ ಎಂಜಿನ್‌ನನ್ನೇ ಅವಲಂಬಿಸಿವೆ. ಎಂಜಿನ್ ಚಾಲನೆಯಲ್ಲಿದ್ದರೆ ಮಾತ್ರ ದೀಪ ಬೆಳಗುವುದು. ಸಾಧಾರಣ ದೀಪಗಳು ಉಷ್ಣ ತಂತು ತಂತ್ರಜ್ಞಾನ ಹೊಂದಿರುವುದರಿಂದ ಎಂಜಿನ್‌ನಿಂದ ಹೆಚ್ಚು ಶಕ್ತಿ ಬಯಸುತ್ತವೆ. ಇದರಿಂದ ಎಂಜಿನ್‌ನ ಶಕ್ತಿ ಕುಂಠಿತವಾಗುತ್ತದೆ. ಹಾಗೆಯೇ ಎಂಜಿನ್ ಕಾರ್ಯಕ್ಷಮತೆಯೂ ಕಡಿಮೆಯಾಗುತ್ತದೆ. ದೀಪ ಹೊತ್ತಿಸಿದಾಗ ಹೆಚ್ಚು ಶಕ್ತಿಯನ್ನು ಎಂಜಿನ್ ಪೂರೈಸಬೇಕಾದ್ದರಿಂದ ಇಂಧನ ಬಳಕೆ ಹೆಚ್ಚಾಗುತ್ತದೆ. ಆದರೆ ಕ್ಸೆನಾನ್ ದೀಪಗಳು ಸಾಧಾರಣ ದೀಪಗಳಿಗಿಂತ ಅರ್ಧದಷ್ಟು ಕಡಿಮೆ ಶಕ್ತಿ ಬಳಸಿಕೊಳ್ಳುತ್ತವೆ. ಇದರಿಂದ ಎಂಜಿನ್ ಮೇಲಿನ ಹೆಚ್ಚುವರಿ ಹೊರೆ ಕಡಿಮೆಯಾಗಿ ಕಾರ್ಯಕ್ಷಮತೆ ಹೆಚ್ಚುತ್ತದೆ. ಮೈಲೇಜ್ ಸಹ ಸುಧಾರಿಸುತ್ತದೆ.

ಈಗಾಗಲೇ ವಿದೇಶಗಳಲ್ಲಿ ಬಳಕೆಗೆ ಬರುತ್ತಿರುವ ಈ ದೀಪಗಳು ಭಾರತದಲ್ಲೂ ಬರಲಿವೆ. ಮರ್ಸಿಡೆಸ್ ಬೆಂಜ್ ಕಂಪನಿಯು ಈಗಾಗಲೆ ಕ್ಸೆನಾನ್ ದೀಪಗಳನ್ನು ಅಳವಡಿಸಿಕೊಂಡ ಕಾರುಗಳನ್ನು ಭಾರತದ ಮಾರುಕಟ್ಟೆಗೆ ಪರಿಚಯಿಸಿದೆ.

ಹೀಗೆ ಬಹುಮುಖ ವಿಶೇಷತೆಗಳನ್ನು ಒಳಗೊಂಡಿರುವ ಈ ಕ್ಸೆನಾನ್ ದೀಪವು ಭವಿಷ್ಯದಲ್ಲಿ ಅತಿ ಹೆಚ್ಚಾಗಿ ಬಳಕೆಯಾಗಲಿದೆ.

○ ನೇಸರ ಕಾಡನಕುಪ್ಪೆ



ಕ್ಸೆನಾನ್ ಬಲ್ಬ್‌ನಿಂದ ಬರುವ ವಿಶಾಲ, ಪ್ರಖರ ಬೆಳಕು



ಸಾಧಾರಣ ಬಲ್ಬ್‌ನಿಂದ ಬರುವ ಕಡಿಮೆ ಪ್ರಮಾಣದ ಬೆಳಕು



ವಾಹನಗಳ ಮುಂಭಾಗದಲ್ಲಿ ಜೋಡಿಸುವ 'ಕ್ಸೆನಾನ್' ಹೆಡ್‌ಲೈಟ್ಸ್

ಮೊಬೈಲ್ ಮಾತು

ಮೊಬೈಲ್ ಬೆಲೆ ಸಮರ

ಬಿಎಸ್‌ಎನ್‌ಎಲ್

	ಸ್ಥಳೀಯ ಕರೆ		ಎಸ್‌ಟಿಡಿ ಕರೆ	
	ಹಾಲಿ	ಹೊಸ	ಹಾಲಿ	ಹೊಸ
ಮೊಬೈಲ್‌ನಿಂದ ಮೊಬೈಲ್‌ಗೆ(ಪ್ರಿ ಪೇಯ್ಡ್)	2.20	0.90	2.40	2.00
ಮೊಬೈಲ್‌ನಿಂದ ಸ್ಥಿರ ದೂರವಾಣಿಗೆ (ಪ್ರಿ ಪೇಯ್ಡ್)	2.40	1.20	2.40 [illegible] 3.60 [illegible]	ಬದಲಾವಣೆ ಇಲ್ಲ 2.40
ಮೊಬೈಲ್‌ನಿಂದ ಮೊಬೈಲ್‌ಗೆ (ಪೋಸ್ಟ್ ಪೇಯ್ಡ್)	1.40	0.80	1.80	ಬದಲಾವಣೆ ಇಲ್ಲ
ಮೊಬೈಲ್‌ನಿಂದ ಸ್ಥಿರ ದೂರವಾಣಿಗೆ	1.80	1.20	1.80 3.60	1.80 2.4
ಸ್ಥಿರ ದೂರವಾಣಿಯಿಂದ ಸ್ಥಿರ ದೂರವಾಣಿಗೆ	ಬದಲಾವಣೆ ಇಲ್ಲ	ಬದಲಾವಣೆ ಇಲ್ಲ	1.80	1.20
(100 -200 ಕಿ.ಮೀ)* -200 ಕಿ.ಮೀ)	ಬದಲಾವಣೆ ಇಲ್ಲ	ಬದಲಾವಣೆ ಇಲ್ಲ	3.60	2.40

ಹಚ್		
ಕರೆ ಸ್ವರೂಪ	ಸ್ಥಳೀಯ	ಎಸ್‌ಟಿಡಿ
ಎಲ್ಲ ಮೊಬೈಲ್‌ಗಳಿಗೆ	0.99	2.99
ಸ್ಥಿರ ದೂರವಾಣಿಗಳಿಗೆ	1.69	2.25
ಏರ್‌ಟೆಲ್		
ಏರ್‌ಟೆಲ್‌ದಿಂದ ಏರ್‌ಟೆಲ್	1.00	2.00
ಇತರ ಸಂಸ್ಥೆಗಳ ಮೊಬೈಲ್‌ಗೆ / ಸ್ಥಿರ ದೂರವಾಣಿಗೆ	2.25	3.25
ರಿಲಯನ್ಸ್		
ರಿಲಯನ್ಸ್‌ನಿಂದ ರಿಲಯನ್ಸ್‌ಗೆ	0.99	1.79
ಇತರ ಸಂಸ್ಥೆಗಳ ಮೊಬೈಲ್‌ಗೆ / ಸ್ಥಿರ ದೂರವಾಣಿಗೆ	1.79	2.49

* ರಿಲಯನ್ಸ್ ಮತ್ತು ಏರ್‌ಟೆಲ್ ಪ್ರಿ ಪೇಯ್ಡ್ ಗ್ರಾಹಕರಿಗೆ, ಹಚ್ ಪೋಸ್ಟ್ ಪೇಯ್ಡ್ ಗ್ರಾಹಕರಿಗೆ, ಬಿಎಸ್‌ಎನ್‌ಎಲ್ ಮೊಬೈಲ್‌ನ ಎರಡೂ ಬಗೆಯ ಗ್ರಾಹಕರಿಗೆ ಮತ್ತು ಸ್ಥಿರ ದೂರವಾಣಿ ಗ್ರಾಹಕರಿಗೂ ಹೊಸ ದರ ಅನ್ವಯಿಸಲಿದೆ.

'ಕಡಿಮೆ ದರ ಹೆಚ್ಚು ಮಾತು'.... ಇದು ಸದ್ಯಕ್ಕೆ ದೇಶದ ಮೊಬೈಲ್ ಪೇಟೆಯಲ್ಲಿ ಕೇಳಿ ಬರುತ್ತಿರುವ ಮಾತು. ಮೊಬೈಲ್ ಸೇವಾ ಸಂಸ್ಥೆಗಳು ಪೈಪೋಟಿ ಮೇಲೆ ದರ ತಗ್ಗಿಸುತ್ತಿವೆ. ಸ್ವಾತಂತ್ರ್ಯ ದಿನೋತ್ಸವದ ಕೊಡುಗೆಯಾಗಿ ರಿಲಯನ್ಸ್ ತನ್ನ ಪ್ರಿ ಪೇಯ್ಡ್ ದರಗಳನ್ನು ಕಡಿಮೆ ಮಾಡಿದ್ದೇ ನೆಪವಾಯಿತು. ರಿಲಯನ್ಸ್ ಹಿಂಬಾಲಿಸಿ ಏರ್‌ಟೆಲ್, ಹಚ್ ಸಂಸ್ಥೆಗಳು ಕರೆ ಶುಲ್ಕ ಕಡಿಮೆ ಮಾಡಿದವು. ನಾವೇನೂ ಕಮ್ಮಿ ಇಲ್ಲ ಎಂದು ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ ಲಿಮಿಟೆಡ್ (ಬಿಎಸ್‌ಎನ್‌ಎಲ್) ಸಹ ಕಳೆದ ವಾರ ಮೊಬೈಲ್ ಮತ್ತು ಸ್ಥಿರ ದೂರವಾಣಿ ದರಗಳನ್ನು ಕಡಿಮೆ ಮಾಡಿತು. ಹೊಸ ದರಗಳ ಲಾಭ ಪಡೆಯಲು ಏರ್‌ಟೆಲ್, ಹಚ್ ಒಂದು ಕಾಲಕ್ಕೆ ಮಾತ್ರ ನಿರ್ದಿಷ್ಟ ಮೊತ್ತ ಪಾವತಿಸುವ ನಿಬಂಧನೆ ವಿಧಿಸಿವೆ. ಸೆಪ್ಟೆಂಬರ್ 10ರಿಂದ ಜಾರಿಗೆ ಬರಲಿರುವ ಬಿಎಸ್‌ಎನ್‌ಎಲ್‌ನ ದರಗಳಿಗೆ ಇಂತಹ ವಿಶೇಷ ಶುಲ್ಕ ಪಾವತಿಸಬೇಕಾಗಿಲ್ಲ. ಒಟ್ಟಾರೆ ಗ್ರಾಹಕರ ಗೊಂದಲಗಳು ಮತ್ತಷ್ಟು ಹೆಚ್ಚಿದಂತಾಗಿದೆ. ಯಾವ ದರಪಟ್ಟಿ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಅನಿಶ್ಚಿತತೆ ಸದ್ಯಕ್ಕೆ ಕೊನೆಗೊಂಡಂತೆ ಕಾಣುತ್ತಿಲ್ಲ.

'ಮಾತು ಮನ ಕೆಡಿಸಿತ್ತು, ತೂತು ಒಲೆ ಕೆಡಿಸಿತ್ತು' ಎಂಬಂತೆ ಬರೀ ಮಾತು, ಮಾತಿನಲ್ಲಿಯೇ ಮಹಡಿ ಕಟ್ಟದೇ ಬೇರೆ ಕೆಲಸ ಕಾರ್ಯಗಳತ್ತಲೂ ಗಮನ ಹರಿಸುವಂತಾದರೆ ಮಾತ್ರ ಮೊಬೈಲ್‌ನ ಮಾತಿನ ಮಹಿಮೆಯು ಸದುಪಯೋಗವಾದೀತು.



ಚಿಣ್ಣರ ಮೇಲೆ ಮೊಬೈಲ್ ಪ್ರಭಾವ

ಅಜ್ಜ, ಅಜ್ಜಿ ಮೊಮ್ಮಕ್ಕಳಿಗೆ ರಾಜಕುಮಾರ, ರಾಜಕುಮಾರಿಯ ಕಥೆ ಹೇಳುತ್ತ ಮಕ್ಕಳನ್ನು ಬೇರೊಂದು ಕನಸಿನ ಲೋಕಕ್ಕೆ ಕರೆದೊಯ್ಯುತ್ತಾರೆ. ಕಥೆಗಳು ಮಕ್ಕಳ ಮನಸ್ಸಿನ ಮೇಲೆ ವಿಶಿಷ್ಟ ಪ್ರಭಾವ ಬೀರುವುದರಲ್ಲಿ ಯಾರಿಗೂ ಅನುಮಾನ ಇಲ್ಲ. ಕಾಲ ಬದಲಾಗುತ್ತಿದ್ದರೂ ಹಿರಿಯರು ಚಿಕ್ಕವರಿಗೆ ಕಥೆ ಹೇಳುವುದು ಇಂದಿಗೂ ನಡೆದುಕೊಂಡು ಬಂದಿದೆ. ಆಧುನಿಕ ಸಂಪರ್ಕ ಸಾಧನಗಳು ಜೀವನ ವಿಧಾನದ ಮೇಲೆ ದಾಳಿ ಮಾಡುತ್ತಿವೆ. ಆಧುನಿಕ ಸಂಪರ್ಕ ಸಾಧನ ಮೊಬೈಲ್‌ಗಳು ಕೂಡ ಈಗ ಹಿರಿಯರು ಮತ್ತು ಮಕ್ಕಳ ನಡುವಿನ ಸಂಪರ್ಕಕ್ಕೆ ಅಡ್ಡಿಯಾಗುತ್ತಿವೆ. ಮಕ್ಕಳ ಮನಸ್ಥಿತಿ ಮೇಲೆ ಮೊಬೈಲ್‌ಗಳು ಪ್ರತಿಕೂಲ ಪರಿಣಾಮ ಬೀರುತ್ತಿರುವುದು ಸಮೀಕ್ಷೆಯಲ್ಲಿ ದೃಢಪಟ್ಟಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಹೆಚ್ಚು ಹೆಚ್ಚಾಗಿ ಮೊಬೈಲ್‌ಗಳಿಗೆ ಅಂಟಿಕೊಳ್ಳುತ್ತಿರುವುದು ಲಂಡನ್‌ನಲ್ಲಿ ಕಂಡು ಬಂದಿದೆ. ಇತರ ಆಟಿಕೆಗಳಿಗಿಂತ ಮೊಬೈಲ್‌ನಲ್ಲಿನ ಆಟ ಮತ್ತು ಸಂಕ್ಷಿಪ್ತ ಸಂದೇಶಗಳನ್ನು ಕಳಿಸುವುದು ಚಿಣ್ಣರಲ್ಲಿ ಹೆಚ್ಚು ಜನಪ್ರಿಯಗೊಳ್ಳುತ್ತಿದೆ. ಅದರಲ್ಲೂ ಕಾರ್‌ನಲ್ಲಿ ಕುಳಿತು ವಿಹಾರಕ್ಕೆ ತೆರಳುವಾಗಲೂ ಮಕ್ಕಳು ಹರಟೆ, ಮೋಜು, ರಂಜನೆ, ಹಾಸ್ಯ, ಕೀಟಲೆ ಪ್ರವೃತ್ತಿ ಮರೆತು ಮೊಬೈಲ್‌ನಲ್ಲಿಯೇ ಕಣ್ಣು, ಕೈ ನೆಟ್ಟು ಕೂತಿರುತ್ತಾರಂತೆ. ಮೊಬೈಲ್‌ನಿಂದ ಮಾತು ಕೇಳುತ್ತ, ಸಂಕ್ಷಿಪ್ತ ಸಂದೇಶ ಸೇವೆ (ಎಸ್‌ಎಂಎಸ್) ಕಳಿಸುತ್ತ, ಸ್ವೀಕರಿಸುತ್ತಲೇ ಕಾಲ ಹರಣ ಮಾಡುವರಂತೆ. ಮಕ್ಕಳಲ್ಲಿ 'ಮೊಬೈಲ್ ವ್ಯಸನ' ಹೆಚ್ಚುವುದಕ್ಕೆ ಪಾಲಕರ ಪಾತ್ರವೂ ಮುಖ್ಯವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಅದೊಂದು ಸಂಪರ್ಕ ಸಾಧನವನ್ನಾಗಿ ಮಾತ್ರ ಬಳಸುವುದಕ್ಕೆ ಆದ್ಯತೆ ನೀಡಬೇಕಾಗಿದೆ. ರಂಜನೆ, ಆಟಕ್ಕೂ ಮೊಬೈಲ್ ಅನ್ನೇ ನೆಚ್ಚಿಕೊಳ್ಳುವುದಕ್ಕೆ ಪಾಲಕರು ಸಾಧ್ಯವಾದಷ್ಟು ಕಡಿವಾಣ ಹಾಕುವ ನಿಟ್ಟಿನಲ್ಲಿ ಮೊದಲಿನಿಂದಲೇ ಎಚ್ಚರಿಕೆ ವಹಿಸಿದರೆ ಚಿಣ್ಣರ ಮೊಬೈಲ್ ವ್ಯಸನಕ್ಕೆ ಮದ್ದು ಹಾಕಬಹುದು.

ರಿಲಯನ್ಸ್ ಷೋ ಟೈಂನಲ್ಲಿ 'ಧೂಮ್' ಪ್ರಚಾರ



ರಿಲಯನ್ಸ್ ಇಂಡಿಯಾ ಮೊಬೈಲ್‌ನ 'ಷೋ ಟೈಂ'ನಲ್ಲಿ ಈ ಬಾರಿ ಯಶ್‌ರಾಜ್ ಫಿಲಂಸ್‌ನ 'ಧೂಮ್' ಚಿತ್ರದ ಪ್ರಚಾರ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಭಿಷೇಕ್ ಬಚ್ಚನ್, ಈಶಾ ಡಿಯೋಲ್, ಜಾನ್ ಅಬ್ರಹಾಂ ಮತ್ತು ಉದಯ್ ಚೋಪ್ರಾ, ನಿರ್ದೇಶಕ ಸಂಜಯ್ ಗಢ್ವಿ ಮುಂತಾದವರು ಮುಂಬೈನ ಮಾಹಿಮ್‌ದಲ್ಲಿನ ರಿಲಯನ್ಸ್ ವೆಬ್‌ವರ್ಲ್ಡ್‌ನಲ್ಲಿ ನೆರೆದಿದ್ದರು. 'ಆರ್ ವರ್ಲ್ಡ್' ಸ್ಪರ್ಧೆಯಲ್ಲಿ ವಿಜೇತರಾದವರು ದೇಶದ 10 ಮಹಾ ನಗರಗಳಲ್ಲಿನ ವೆಬ್ ವರ್ಲ್ಡ್ ಮೂಲಕ ತಮ್ಮ ನೆಚ್ಚಿನ ತಾರೆಯರ ಜೊತೆ ವಿಡಿಯೊ ಸಂವಾದ ನಡೆಸಿದರು.

ಸಂಖ್ಯಾಸಹಿ ಅಂತರಜಾಲ ವ್ಯಾಪಾರೋದ್ಯಮಕ್ಕೆ ನೆರವು

ಸಾವಿರಾರು ವರ್ಷಗಳ ಹಿಂದೆ ವ್ಯಾಪಾರವನ್ನು ರಹಸ್ಯವಾದ ಚಿಹ್ನೆಗಳನ್ನು ಉಪಯೋಗಿಸಿ ಮಾಡುತ್ತಿದ್ದರು ಎಂಬ ಇತಿಹಾಸ. ಇಲ್ಲಿ ಸಂದೇಶವಾಹಕರ ಮೂಲಕ ಮಾಡುವ ವ್ಯಾಪಾರದ ಕರಾರನ್ನು ಗೌಪ್ಯ ಚಿಹ್ನೆಗಳಾಗಿ ಪರಿವರ್ತಿಸಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವ್ಯಾಪಾರ ಸಂದೇಶವನ್ನು ಕಳುಹಿಸುತ್ತಿದ್ದರು. ಮುಂದೆ ಸಹಿಯನ್ನು ಉಪಯೋಗಿಸುವುದನ್ನು ಮಾನವ ಕಲಿತ. ಯಾವುದಾದರೂ ಕರಾರು ಪತ್ರಕ್ಕೆ ಒಪ್ಪಿಗೆಯಾದರೆ ಅದಕ್ಕೆ ತನ್ನ ಸಹಿಯನ್ನು ಹಾಕುತ್ತಿದ್ದ.

ಸಾಮಾನ್ಯ ಭಾಷೆಯಲ್ಲಿ ಸಹಿ ಎಂದರೆ ಯಾವುದಾದರೂ ಬರವಣಿಗೆಯ ಕೆಳಗೆ ಹೆಸರು ಅಥವಾ ಯಾವುದಾದರೂ ಚಿಹ್ನೆ ಹಾಕಿದರೆ ಸದರಿ ಬರವಣಿಗೆ ಬರೆದವರೆಂದು ಮತ್ತು ಸದರಿ ಬರವಣಿಗೆಯಲ್ಲಿ ಬರೆದದ್ದನ್ನು ಬರೆದುಕೊಟ್ಟವರು ಒಪ್ಪಿಕೊಂಡಿರುವುದಾಗಿ ಅರ್ಥ. ಕಾನೂನಿನ ಭಾಷೆಯಲ್ಲಿ ಸಹಿ ಎಂದರೆ ಯಾವುದಾದರೂ ಕರಾರು ಪತ್ರಕ್ಕೆ ಅಥವಾ ಯಾವುದಾದರೂ ದಸ್ತಾವೇಜುಗಳ ಕೆಳಗೆ ಚಿಹ್ನೆ ಅಥವಾ ಹೆಸರನ್ನು ಬರೆದರೆ ಕಾನೂನಿನ ರೀತ್ಯ ಸದರಿ ದಸ್ತವೇಜಿನ ಅಂಶಗಳಿಗೆ ಒಪ್ಪಿಗೆ ಸಿಕ್ಕಿದೆ ಎಂದು ಅರ್ಥ. ಸಹಿ ಎಂದರೆ ಹೆಸರು ಬರೆಯಬಹುದು ಅಥವಾ ಚಿಹ್ನೆಯನ್ನೂ ಹಾಕಬಹುದು.

ಆಧುನಿಕ ತಂತ್ರಜ್ಞಾನ ಬೆಳೆದಂತೆಲ್ಲ ಅಂತರ್ಜಾಲದಲ್ಲಿ ವಿದ್ಯುನ್ಮಾನ ವಾಣಿಜ್ಯೋದ್ಯಮ **(e -commerce)** ವಿದ್ಯುನ್ಮಾನ ವ್ಯಾಪಾರ **(e -business),** ಮತ್ತು ವಿದ್ಯುನ್ಮಾನ ಮಾರುಕಟ್ಟೆ **(e-marketing)** ತ್ವರಿತಗತಿಯಲ್ಲಿ ವಿಶ್ವದಾದ್ಯಂತ ಹರಡುತ್ತಿದೆ. ಸಾಮಾನ್ಯವಾಗಿ ದಸ್ತಾವೇಜುಗಳಿಗೆ ಸಹಿ ಹಾಕುವ ಹಾಗೆ ಅಂತರಜಾಲದಲ್ಲಿ ದಸ್ತಾವೇಜುಗಳಿಗೆ ಸಹಿ ಹಾಕಲು ಸಾಧ್ಯವಾಗುವುದಿಲ್ಲ. ಹಾಗಾದರೆ ಅಂತರಜಾಲದಲ್ಲಿ ಮಾಡುವ ವಾಣಿಜ್ಯೋದ್ಯಮ ಅಥವಾ ವ್ಯಾಪಾರ ಉದ್ಯಮಗಳಿಗೆ ಸಂಬಂಧಪಟ್ಟ ಹಾಗೆ ಕರಾರುಪತ್ರಗಳಿಗೆ ಸಹಿ ಹಾಕಬೇಕಾದರೆ ಯಾವ ರೀತಿಯ ಸಹಿ ಹಾಕಬಹುದು? ಸದರಿ ಸಹಿಯನ್ನು ಮೂರನೇ ವ್ಯಕ್ತಿ ಕಳ್ಳ ಸಹಿ ಎನ್ನಬಾರದು ಅಥವಾ ಸದರಿ ದಸ್ತವೇಜನ್ನು ತಿದ್ದಲು ಸಾಧ್ಯವಾಗಬಾರದು. ಎದುರುದಾರರಿಗೆ ಅದು ಅವರದ್ದೇ ಸಹಿ ಎಂದು ದೃಢವಾಗಬೇಕು ಹಾಗೂ ಆ ಸಹಿಯ ಪರಿಚಯವಾಗಬೇಕು. ಹೇಗೆ? ತಂತ್ರಜ್ಞರ ಸತತ ಪ್ರಯತ್ನದಿಂದ ಕಂಡುಹಿಡಿದಿದ್ದೇ ಸಂಖ್ಯಾಸಹಿ **(Digital Signature)**

ಸಂಖ್ಯಾಸಹಿ ಎಂದರೆ ಏನು?

ಸಂಖ್ಯಾಸಹಿ ಎಂಬ ಪದವನ್ನು ಕಾನೂನಿನ ರೀತಿಯಲ್ಲಿ ವಿಶ್ಲೇಷಣೆ ಮಾಡಿದರೆ ವಿದ್ಯುನ್ಮಾನ ದಾಖಲೆಗಳಿಗೆ ಹಾಕುವ ಚಿಹ್ನೆ ಎಂದಾಗುತ್ತದೆ. ಸಂಖ್ಯಾ ಸಹಿ ಎಂದರೆ ಒಂದು ಸಂಖ್ಯಾಗುಂಪು. ಸಂಖ್ಯಾಸಹಿಯನ್ನು ಮಾಡುವ ಮೂಲ ಉದ್ದೇಶವೇನೆಂದರೆ, ಸಹಿಯನ್ನು ಮಾಡಿದವರ ಅಸ್ತಿತ್ವ ಪರಿಶೀಲಿಸಿ ಮತ್ತು ಸದರಿ ಸಹಿ ಮತ್ತು ದಾಖಲೆಪತ್ರಗಳು ಅಥವಾ ದಸ್ತಾವೇಜುಗಳು ಯಾವುದೇ ರೀತಿಯ ಬದಲಾವಣೆಗಳು ಆಗಿಲ್ಲ ಎಂಬ ದೃಢೀಕರಣವನ್ನು ಮೂರನೆಯ ನಂಬಿಕಸ್ಥ ಪ್ರತಿನಿಧಿಯಿಂದ **(certifying authority)** ಪಡೆಯುವುದು. ಇದರಲ್ಲಿ ಒಂದು ಸಂದೇಶವನ್ನು ಸಂಖ್ಯೆಗಳ ರೂಪಕ್ಕೆ ಬದಲಾಯಿಸುವ ತಂತ್ರಜ್ಞಾನ ಅಡಗಿದೆ.

ಸಂಖ್ಯಾಸಹಿಯ ಇತಿಹಾಸ

ಸಂಖ್ಯಾಸಹಿಯನ್ನು ಕ್ರಿಪ್ಟೋಗ್ರಫಿ ಅಂದರೆ ಗುಪ್ತವಾದ ಭಾಷೆ ಎಂದೂ ಅರ್ಥೈಸಬಹುದು. ಇದು ಒಂದು ಪ್ರಾಚೀನವಾದ ವಿಜ್ಞಾನ. ಸದರಿ ವಿಜ್ಞಾನ ಪ್ರಾರಂಭವಾದುದು ಕ್ರಿ.ಪೂ. 2000 ವರ್ಷಗಳ ಹಿಂದೆ ಎಂದರೆ ಆಶ್ಚರ್ಯವಾಗಬಹುದು. ಆದರೆ ಇದು ನಿಜ. ಸಾವಿರಾರು ವರ್ಷಗಳ ಹಿಂದೆ ರಾಜರು, ದಂಡನಾಯಕರು ಸೇನಾ ರಹಸ್ಯವನ್ನು ಬೇರೆ ರಾಜ್ಯಗಳಿಗೆ ಸಂದೇಶವಾಹಕರ ಮೂಲಕ ಕಳುಹಿಸುವ ಮೊದಲು ಸದರಿ ಸಂದೇಶವನ್ನು ರಹಸ್ಯ ಚಿಹ್ನೆಗಳನ್ನಾಗಿ ಪರಿವರ್ತಿಸಿ ಕಳುಹಿಸುತ್ತಿದ್ದರು. ಸಂದೇಶದ ಜೊತೆಯಲ್ಲಿ ರಹಸ್ಯ ಚಿಹ್ನೆಗಳನ್ನು ಉಪಯೋಗಿಸಿ ಸಂದೇಶವನ್ನಾಗಿ ಪರಿವರ್ತಿಸುವ ರಹಸ್ಯವನ್ನೂ ಸಹ ಕಳುಹಿಸುತ್ತಿದ್ದರು. ರಹಸ್ಯ ಭಾಷೆಯನ್ನು ಇಂದು ಆಧುನಿಕ ತಂತ್ರಜ್ಞಾನ ಅಳವಡಿಸಿ ಸಂಖ್ಯಾಸಹಿಗಳನ್ನಾಗಿ ಪರಿವರ್ತಿಸಿದ್ದಾರೆ. ಈ ಕ್ರಿಪ್ಟೋಗ್ರಫಿಯನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಒಂದು ಸಿಮೆಟ್ರಿಕ್ ಕ್ರಿಪ್ಟೋಗ್ರಫಿ ಅಂದರೆ ಸಂದೇಶವನ್ನು ಸಂಖ್ಯೆಗಳನ್ನಾಗಿ ಪರಿವರ್ತಿಸುವ ಹಾಗೂ ಸದರಿ ಸಂಖ್ಯೆಗಳನ್ನು ಪುನಃ ಸಂದೇಶವನ್ನಾಗಿ ಪರಿವರ್ತಿಸುವ ರಹಸ್ಯ. ಮತ್ತೊಂದು ಅಸಿಮೆಟ್ರಿಕ್ ಕ್ರಿಪ್ಟೋಗ್ರಫಿ ಅಂದರೆ ಸಂದೇಶವನ್ನು ರಹಸ್ಯ ಚಿಹ್ನೆಗಳನ್ನಾಗಿ ಪರಿವರ್ತಿಸುವ ರಹಸ್ಯ ಹಾಗೂ ರಹಸ್ಯ ಚಿಹ್ನೆಗಳನ್ನು ಸಂದೇಶವನ್ನಾಗಿ ಪರಿವರ್ತಿಸುವ ರಹಸ್ಯ.

ಸಿಮೆಟ್ರಿಕ್ ಕ್ರಿಪ್ಟೋಗ್ರಫಿ

ಕ್ರಿ.ಶ. 1970 ರವರೆಗೆ ತಂತ್ರಜ್ಞಾನದಲ್ಲಿ ಸಿಮೆಟ್ರಿಕ್ ಕ್ರಿಪ್ಟೋಗ್ರಫಿ ಉಪಯೋಗಿಸುತ್ತಿದ್ದರು. ಸಂದೇಶ ರವಾನಿಸುವಾತ ಸಂದೇಶದ ಗೌಪ್ಯ ಭಾಷೆಯನ್ನು ಸಾಮಾನ್ಯ ಭಾಷೆಯನ್ನಾಗಿ ಪರಿವರ್ತಿಸುವ ರಹಸ್ಯ ಚಿಹ್ನೆ ಅಂದರೆ ತಂತ್ರಜ್ಞಾನದ ಭಾಷೆಯಲ್ಲಿ ಹೇಳಬೇಕಾದರೆ ರಹಸ್ಯ ಕೀಲಿಕೈಯನ್ನು **(secret key)** ಸಂದೇಶದ ಜೊತೆಯಲ್ಲಿ ರವಾನಿಸುತ್ತಿದ್ದರು. ಸಂದೇಶ ಸಿಕ್ಕಿದವರು ರಹಸ್ಯ ಕೀಲಿಕೈ ಉಪಯೋಗಿಸಿ ರಹಸ್ಯ ಭಾಷೆಯನ್ನು ಸಾಮಾನ್ಯ ಭಾಷೆಯನ್ನಾಗಿ ಪರಿವರ್ತಿಸಿ ಓದುತ್ತಿದ್ದರು. ಈ ವ್ಯವಸ್ಥೆಯಲ್ಲಿ ಸೌಕರ್ಯಕ್ಕಿಂತ ಅಪಾಯಗಳೇ ಹೆಚ್ಚು. ರಹಸ್ಯ ಸಂದೇಶ ತೆಗೆದುಕೊಂಡು ಹೋಗುವ ಸಂದೇಶವಾಹಕ ಅಥವಾ ಆತನ ಸಹಾಯದಿಂದ ಮೂರನೆಯ ಮನುಷ್ಯ ಸಂದೇಶದ ಜೊತೆಯಲ್ಲಿರುತ್ತಿದ್ದ ರಹಸ್ಯ ಚಾವಿ ಉಪಯೋಗಿಸಿ ಸಂದೇಶದ ರಹಸ್ಯ ಭೇದಿಸಬಹುದಾಗಿತ್ತು.

ಅಸಿಮೆಟ್ರಿಕ್ ಕ್ರಿಪ್ಟೋಗ್ರಫಿ

1970ರ ಬಳಿಕ ಚಾಲ್ತಿಯಲ್ಲಿ ಬಂದಿರುವುದು ಅಸಿಮೆಟ್ರಿಕ್ ಕ್ರಿಪ್ಟೋಗ್ರಫಿ. ವ್ಯವಸ್ಥೆಯಲ್ಲಿ ಸಂದೇಶವನ್ನು ರಹಸ್ಯ ಭಾಷೆಯನ್ನಾಗಿ ಪರಿವರ್ತಿಸಲು ಬಳಸುವ ರಹಸ್ಯ ಚಿಹ್ನೆಗಾಗಿ ಉಪಯೋಗಿಸುವುದು ಸಾರ್ವಜನಿಕ ಚಾವಿ **(public key).** ಸಂದೇಶವು ತಲುಪಿದ ಮೇಲೆ ಸಂದೇಶವನ್ನು ಸಾಮಾನ್ಯ ಭಾಷೆಯನ್ನಾಗಿ ಪರಿವರ್ತಿಸಲು ಸಂದೇಶ ತೆಗೆದುಕೊಂಡಾತ ಉಪಯೋಗಿಸುವುದು ತನ್ನಲ್ಲಿರುವ ಸ್ವಂತ ಚಾವಿ. ಅಸಿಮೆಟ್ರಿಕ್ ಕ್ರಿಪ್ಟೋಗ್ರಫಿ ಇಂದೂ ಸಹ ಚಾಲ್ತಿಯಲ್ಲಿದೆ. ಇಂದು ಸಂಖ್ಯಾಸಹಿ ಅಸಿಮೆಟ್ರಿಕ್ ಕ್ರಿಪ್ಟೋಗ್ರಫಿಯ ತಂತ್ರಜ್ಞಾನದಿಂದ ರೂಪಿಸಲಾಗಿದೆ. ತಂತ್ರಜ್ಞಾನವನ್ನು ಕಂಡುಹಿಡಿದವರು ಖ್ಯಾತ ವಿಜ್ಞಾನಿಗಳಾದ ವೈಟ್‌ಫಿಲ್ಡ್ ಡಿಫಿ ಮತ್ತು ಮಾರ್ಟಿನ್ ಹೆಲ್‌ಮ್ಯಾನ್. ತಂತ್ರಜ್ಞಾನದ ಭಾಷೆಯಲ್ಲಿ ಸಾರ್ವಜನಿಕ ಕೀ ಹಾಗೂ ಸ್ವಂತ ಕೀ ಅಂದರೆ ಒಂದು ಸಂಖ್ಯೆಗಳ ಗುಂಪು.

ತಂತ್ರಜ್ಞಾನ ಬೆಳೆದಂತೆಲ್ಲ ಅಂತರ್ಜಾಲದಲ್ಲಿ ವಿದ್ಯುನ್ಮಾನ ವಾಣಿಜ್ಯೋದ್ಯಮ, ವಿದ್ಯುನ್ಮಾನ ವ್ಯಾಪಾರ ಮತ್ತು ವಿದ್ಯುನ್ಮಾನ ಮಾರುಕಟ್ಟೆ ತ್ವರಿತಗತಿಯಲ್ಲಿ ಬೆಳೆಯುತ್ತಿದೆ. ಅಂತರಜಾಲದಲ್ಲಿ ಮಾಡುವ ವಾಣಿಜ್ಯೋದ್ಯಮ ಅಥವಾ ವ್ಯಾಪಾರ ಉದ್ಯಮಗಳಿಗೆ ಸಂಬಂಧಪಟ್ಟ ಹಾಗೆ ಕರಾರುಪತ್ರಗಳಿಗೆ ಸಹಿ ಹಾಕಬೇಕಾದರೆ ಯಾವ ರೀತಿಯ ಸಹಿ ಹಾಕಬಹುದು?

ಸಂಖ್ಯಾ ಪ್ರಮಾಣಪತ್ರ **(Digital Certificate)**

ಸಂಖ್ಯಾ ಸಹಿ ಮಾಡುವ ಮೊದಲು ಸಂಖ್ಯಾ ಪ್ರಮಾಣಪತ್ರಗಳನ್ನು **(digital certificate)** ಪಡೆದುಕೊಳ್ಳಬೇಕು. ಸಂಖ್ಯಾ ಪ್ರಮಾಣಪತ್ರದಲ್ಲಿ ಸಾರ್ವಜನಿಕ ಚಾವಿ / ಕೀಲಿಕೈ ನಮೂದಿಸಲಾಗಿರುತ್ತದೆ. ಪ್ರಮಾಣಪತ್ರದಲ್ಲಿ ಸಂಖ್ಯಾ ಸಹಿ ಮಾಡುವವರ ಬಗ್ಗೆ ಪೂರ್ಣ ಮಾಹಿತಿಯಿರುತ್ತದೆ.



ಸಂಖ್ಯಾ ಸರ್ಟಿಫಿಕೇಟ್‌ಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

1) **ಸರ್ವರ್ ಸರ್ಟಿಫಿಕೇಟ್:** ಸರ್ಟಿಫಿಕೇಟ್‌ನಲ್ಲಿ ಸಂದೇಶ ಕಳುಹಿಸುವವರು ಯಾವ ಸರ್ವರ್ ಅಥವಾ ನಿವೇಶನ ಜಾಲದಿಂದ ಸಂದೇಶ ಕಳುಹಿಸಲಾಗುತ್ತದೆ ಎಂಬುದು ದೃಢಪಡಿಸಲಾಗುತ್ತದೆ.

2) **ಪರ್ಸನಲ್ ಸರ್ಟಿಫಿಕೇಟ್:** ಸರ್ಟಿಫಿಕೇಟ್‌ನಲ್ಲಿ ವ್ಯಕ್ತಿಯ ಬಗ್ಗೆ ಮಾಹಿತಿ ಇರುತ್ತದೆ. ಸಂದೇಶ ರವಾನಿಸುವವರಿಗೆ ವ್ಯಕ್ತಿಯ ಪರಿಚಯದ ಅರಿವಾಗುತ್ತದೆ.

3) **ಸಾಫ್ಟ್‌ವೇರ್ ಸರ್ಟಿಫಿಕೇಟ್:** ಸರ್ಟಿಫಿಕೇಟ್‌ನಲ್ಲಿ ಯಾವ ಸಾಫ್ಟ್‌ವೇರ್ ಅಂತರ್ಜಾಲದ ಮೂಲಕ ಹಂಚಲು ಉಪಯೋಗಿಸುತ್ತಾರೆ ಎಂಬುದರ ಪೂರ್ಣ ಮಾಹಿತಿ ಇರುತ್ತದೆ.

4) **ಸರ್ಟಿಫೈಯಿಂಗ್ ಅಥಾರಿಟಿ ಸರ್ಟಿಫಿಕೇಟ್:** ಇದು ತುಂಬ ಮುಖ್ಯವಾದ ಪ್ರಮಾಣಪತ್ರ. ಸರ್ಟಿಫಿಕೇಟ್‌ಗಳನ್ನು ನೀಡುವ ಅಧಿಕಾರಿ ಯಾವ ವ್ಯಕ್ತಿಗೆ ಅಥವಾ ಸಂಸ್ಥೆಗೆ ನೀಡುತ್ತಿದೆ ಎಂಬುದನ್ನು ದೃಢಪಡಿಸಲಾಗುತ್ತದೆ. ಸರ್ಟಿಫಿಕೇಟ್‌ಗಳನ್ನು ಪಡೆಯದೆ ಸಂಖ್ಯಾಸಹಿ ಮಾಡಲು ಸಾಧ್ಯವಿಲ್ಲ.

ಸರ್ಟಿಫೈಯಿಂಗ್ ಅಥಾರಿಟಿ: ಇ- ವಾಣಿಜ್ಯದಲ್ಲಿ ಕರಾರು ಪತ್ರಗಳನ್ನು ಸಹಿ ಮಾಡಿದಾಗ ಸಹಿ ಇಬ್ಬರದ್ದೇ ಎಂದು ಗುರುತಿಸಿ ದೃಢೀಕರಿಸುವುದು ಮುಖ್ಯ. ಹಾಗಾದರೆ ಅಂತರ್ಜಾಲದಲ್ಲಿ ಸಹಿ ಮಾಡಿದವರು ನಿಜವಾಗಿ ಅವರೇ ಯಾರು? ಹಾಗೂ ಸದರಿ ಸಹಿ ಮಾಡಿದವರು ಎಂದು ಯಾರು ದೃಢೀಕರಿಸುತ್ತಾರೆ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಇದಕ್ಕೆ ಸರಿಯಾದ ಉತ್ತರ- ಸಂಖ್ಯಾ ಪ್ರಮಾಣಪತ್ರದಲ್ಲಿರುವ ಸಾರ್ವಜನಿಕ ಚಾವಿ. ಚಾವಿಯಲ್ಲಿ ಸಹಿ ಮಾಡುವವರ ಪೂರ್ಣ ಮಾಹಿತಿ ಇರುತ್ತದೆ. ಚಾವಿಯನ್ನು ಸರ್ಟಿಫೈಯಿಂಗ್ ಅಥಾರಿಟಿ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ನೀಡುತ್ತಾರೆ. ಸಾಮಾನ್ಯವಾಗಿ ಸರ್ಟಿಫೈಯಿಂಗ್ ಅಧಿಕಾರಿ ವಂತಿಕೆದಾರರ ಗುರುತನ್ನು ಪ್ರಮಾಣೀಕರಿಸಲು ನೋಂದಣಿ ಅಧಿಕಾರಿ ಎಂಬ ಏಜೆಂಟ್ ಅಥವಾ ಸಂಸ್ಥೆಗಳನ್ನು ನೇಮಿಸುತ್ತಾರೆ. ಏಜೆಂಟ್ ಅಥವಾ ಸಂಸ್ಥೆಯು ಪ್ರಚಲಿತ ಟೆಲಿಫೋನ್ ಡೈರೆಕ್ಟರಿಯ ಹಾಗೆ ಕೆಲಸ ಮಾಡುತ್ತಾರೆ. ಡೈರೆಕ್ಟರಿಗಳಲ್ಲಿ ನೋಂದಣಿ ಮಾಡಿದವರ ಸಾರ್ವಜನಿಕ ಚಾವಿಯನ್ನು ಹೊಂದಿರುತ್ತಾರೆ. ಇವರು ಸಾಮಾನ್ಯವಾಗಿ ಪ್ರಾಥಮಿಕ ಹಂತದಲ್ಲಿ ನೋಂದಣಾಧಿಕಾರಿಗಳಾಗಿ ಕೆಲಸ ಮಾಡುತ್ತಾರೆ. ಆದರೆ ಸಂಖ್ಯಾಪ್ರಮಾಣಪತ್ರವನ್ನು ವಂತಿಗೆದಾರರಿಗೆ ಕೊಡುವ ಅಧಿಕಾರ ಇವರು ಹೊಂದಿರುವುದಿಲ್ಲ.

ವಂತಿಗೆದಾರ: ವಂತಿಗೆದಾರರೆಂದರೆ, ಯಾರಿಗೆ ಸರ್ಟಿಫೈಯಿಂಗ್ ಅಧಿಕಾರಿ ಸಂಖ್ಯಾ ಸರ್ಟಿಫಿಕೇಟ್‌ನ್ನು ಕೊಡುತ್ತಾರೋ ಅವರನ್ನು ವಂತಿಗೆದಾರರೆಂದು ಕರೆಯುತ್ತಾರೆ. ತಂತ್ರಜ್ಞಾನದ ಭಾಷೆಯಲ್ಲಿ ಹೇಳಬೇಕಾದರೆ ಯಾವ ಮನುಷ್ಯನಿಗೆ ಅಥವಾ ಸಂಸ್ಥೆಗೆ ಸಂಖ್ಯಾ ಸರ್ಟಿಫಿಕೇಟ್ ಹಾಗೂ ಸ್ವಂತ ಕೀ ಕೊಡುತ್ತಾರೋ ಅವರಿಗೆ ವಂತಿಗೆದಾರರೆಂದು ಕರೆಯುತ್ತಾರೆ.


ಸಂಖ್ಯಾಸಹಿ ಮಾಡುವ ವಿಧಾನ: ಯಾವುದಾದರೂ ಕರಾರು ಪತ್ರಕ್ಕೆ ಅಥವಾ ದಸ್ತಾವೇಜಿಗೆ ಸಂಖ್ಯಾಸಹಿ ಮಾಡಿ ಅದನ್ನು ಅಂತರ್ಜಾಲದ ನಿವೇಶನ ಜಾಲಕ್ಕೆ ಕಳುಹಿಸಿದರೆ ಸಹಿ ಹಾಗೂ ಕರಾರುಪತ್ರವನ್ನು ಕಳುಹಿಸಿದ ವಂತಿಗೆದಾರನ ಅಸ್ತಿತ್ವವನ್ನು ಸರ್ಟಿಫೈಯಿಂಗ್ ಅಥಾರಿಟಿ ದೃಢೀಕರಿಸುತ್ತದೆ. ವಂತಿಗೆದಾರ ಕರಾರುಪತ್ರವನ್ನು ಕಳುಹಿಸಿದ ಕೂಡಲೆ ಸಮಯ ಚೀಟಿಯನ್ನು **(time stamp)** ಮಾಡಲಾಗುತ್ತದೆ. ಸಮಯಚೀಟಿಯಲ್ಲಿ ಕರಾರುಪತ್ರಕ್ಕೆ ಸಹಿ ಮಾಡಿದ ಸಮಯ ದಿನ ನಮೂದಿಸಲಾಗಿರುತ್ತದೆ. ಸಹಿ ಮಾಡಿದವನೂ ಸಹ ಕರಾರುಪತ್ರ ಬದಲಾಯಿಸಲು ಸಾಧ್ಯವಾಗುವುದಿಲ್ಲ. ಕರಾರುಪತ್ರದ ಸಹಿಯನ್ನು ಮೂರನೇ ಮನುಷ್ಯ ನಕಲಿ ಸಹಿ ಮಾಡುವ ಹಾಗಿಲ್ಲ. ಸರ್ಟಿಫೈಯಿಂಗ್ ಅಥಾರಿಟಿ ಸದರಿ ಸಹಿಯನ್ನು ಗುರುತಿಸಿ ದೃಢೀಕರಿಸುತ್ತದೆ. ಸಾಮಾನ್ಯವಾಗಿ ದಸ್ತಾವೇಜುಗಳಿಗೆ ಸಹಿ ಹಾಕುವುದನ್ನು ನಕಲಿ ಸಹಿ ಮಾಡಬಹುದು ಅಥವಾ ದಸ್ತಾವೇಜುಗಳನ್ನು ಬದಲಾಯಿಸಬಹುದು. ಆದರೆ ಅಂತರ್ಜಾಲದಲ್ಲಿ ಸಂಖ್ಯಾಸಹಿಯನ್ನು ಯಾರೂ ಬದಲಾಯಿಸಲು ಅಥವಾ ಕಳ್ಳಸಹಿ ಮಾಡಲು ಸಾಧ್ಯವಾಗುವುದಿಲ್ಲ.

ಇ- ವಾಣಿಜ್ಯ ಹಾಗೂ ಇ- ವ್ಯಾಪಾರೋದ್ಯಮ ರಂಗದಲ್ಲಿ ಸಂಖ್ಯಾಸಹಿ ಹೊಸ ಕ್ರಾಂತಿ ಎಬ್ಬಿಸಿದೆ. ಸಂಖ್ಯಾಸಹಿ ಇಲ್ಲದೇ ಇ- ವಾಣಿಜ್ಯ ಅಥವಾ ಇ- ವಿದ್ಯುನ್ಮಾನ ವಾಣಿಜ್ಯ ಊಹಿಸಲೂ ಅಸಾಧ್ಯ. ಮಾಹಿತಿ ತಂತ್ರಜ್ಞಾನ ಅಧಿನಿಯಮವು ಸಂಖ್ಯಾಸಹಿಗೆ ಮಾನ್ಯತೆ ನೀಡಿದೆ. ವಿಪರ್ಯಾಸವೆಂದರೆ, ನಮ್ಮಲ್ಲಿ ತಂತ್ರಜ್ಞಾನದ ಪರಿಕರಗಳ ಅಭಾವದಿಂದ ಸಂಖ್ಯಾಸಹಿಯ ಬಳಕೆ ವಿಳಂಬವಾಗುತ್ತಿದೆ. ಅಂತರ್ಜಾಲದ ವಾಣಿಜ್ಯ ಮತ್ತು ಇ- ವ್ಯಾಪಾರೋದ್ಯಮ ಅಭಿವೃದ್ಧಿಯಾಗಲು ಸದರಿ ಕಾನೂನುಗಳು ತ್ವರಿತಗತಿಯಲ್ಲಿ ಜಾರಿಗೆ ಬರಬೇಕಾಗಿದೆ.

○ ಆರ್.ಜೆ. ಸತೀಶ್ ಸಿಂಗ್

ಪೇಟೆಯಲ್ಲಿ ಹೊಸತು

ವೈಜ್ಞಾನಿಕ ಕ್ಯಾಲ್ಕುಲೇಟರ್



ವಿವಿಧ ಬಗೆಯ ಗಣಿತ ತರ್ಕಗಳ ಸುಸೂತ್ರ ಪರಿಹಾರಕ್ಕಾಗಿ ಕ್ಯಾಸಿಯೋ ಇಂಡಿಯಾ ಕಂಪನಿ ನಾಲ್ಕು ಹೊಸ ವೈಜ್ಞಾನಿಕ ಕ್ಯಾಲ್ಕುಲೇಟರ್‌ಗಳನ್ನು ಬಿಡುಗಡೆ ಮಾಡಿದೆ. ಶೀಘ್ರ ಮರು ಕ್ಯಾಲ್ಕುಲೇಷನ್‌ಗೆ ಇದರಲ್ಲಿ ಅವಕಾಶವಿದೆ. 309 ವೈಜ್ಞಾನಿಕ ಲೆಕ್ಕಾಚಾರ ಸೇರಿದಂತೆ 401 ಫಂಕ್ಷನ್‌ಗಳನ್ನು ಇದರಲ್ಲಿ ಮಾಡಬಹುದು. ಇಂಟಿಗ್ರೇಷನ್, ಫ್ರ್ಯಾಕ್ಷನ್, ಈಕ್ವೇಷನ್, ವೆಕ್ಟರ್ ಮ್ಯಾಟ್ರಿಕ್ಸ್‌ಗಳನ್ನು ಇದರಲ್ಲಿ ಬಗೆಹರಿಸಬಹುದು. ಪ್ರಮುಖ ಮಳಿಗೆಗಳಲ್ಲಿ ಲಭ್ಯ. ವಿವರಗಳಿಗೆ www.casioindiacompany.com

ಝೂರ್ ನೋಟ್‌ಬುಕ್



ಕಾರ್ಪೋರೇಟ್ ವಲಯದ ಅಧಿಕಾರಿಗಳಿಗೆ ಉತ್ತಮ ಗುಣಮಟ್ಟದ ಲೇಖನೋಪಕರಣಗಳನ್ನು ಒದಗಿಸುತ್ತಿದ್ದ ನೈಟಿಂಗೇಲ್ ಕಂಪನಿ ಇದೀಗ ಝೂರ್ ನೋಟ್ ಪುಸ್ತಕಗಳನ್ನು ಬಿಡುಗಡೆ ಮಾಡಿದೆ.

ಉತ್ಕೃಷ್ಟ ಗುಣಮಟ್ಟದ ಈ ನೋಟ್‌ಬುಕ್‌ಗಳು ಕಾರ್ಪೋರೇಟ್ ಕಂಪೆನಿಗಳ ಎಂಡಿ, ಅಧ್ಯಕ್ಷ, ಸಿಇಒ ಅವರ ಅಭಿರುಚಿಗೆ ತಕ್ಕ ಹಾಗೆ ರೂಪಿಸಲಾಗಿದೆ. ಒಂದು ನೋಟ್‌ಬುಕ್‌ನ ಬೆಲೆ ರೂಪಾಯಿ 741. ಹೆಚ್ಚಿನ ವಿವರಗಳಿಗೆ- 080- 36784912ನ್ನು ಸಂಪರ್ಕಿಸಬಹುದು.

ಮೊಡವೆ ನಿರೋಧಕ



ಆಯುರ್ವೇದೀಯ ವೈಯಕ್ತಿಕ ಆರೈಕೆ ಉತ್ಪನ್ನಗಳ ಸಂಸ್ಥೆ ವಿಎಲ್‌ಸಿಸಿ ಪರ್ಸನಲ್ ಕೇರ್‌ನಿಂದ ಮೊಡವೆ ರೋಗ ನಿರೋಧಕ ಚಿಕಿತ್ಸೆಗಳ ಹೊಸ ಶ್ರೇಣಿಯನ್ನು ಬಿಡುಗಡೆ ಮಾಡಿದೆ.

ಡಿಯೋಡ್ರೆಂಟ್ ಸ್ಪ್ರೇ



ಗಾಡ್ರೆಜ್ ಕನ್‌ಸ್ಯೂಮರ್ ಪ್ರೊಡಕ್ಟ್ಸ್ ಲಿಮಿಟೆಡ್ (ಜಿಸಿಪಿಎಲ್) ಡಿಯೋಡ್ರೆಂಟ್ ವಿಭಾಗದಲ್ಲಿ ಆಕರ್ಷಕ ಸಿಂಥಾಲ್ ಪರ್‌ಫ್ಯೂಮ್ಡ್ ಡಿಯೋಡ್ರೆಂಟ್ ಸ್ಪ್ರೇಯನ್ ಹೊರತಂದಿದೆ. ಇದು ಕೊಲೋಗ್ನೆ, ಸ್ಪೈಸ್, ಲೈಮ್ ಮತ್ತು ಸ್ಯಾಂಡಲ್- ಈ ನಾಲ್ಕು ಸುವಾಸನೆಗಳಲ್ಲಿ ಆಕರ್ಷಕ ಲೋಹದ ಪ್ಯಾಕೇಜ್‌ನಲ್ಲಿ ಲಭ್ಯವಿದೆ. ಈ ಸ್ಪ್ರೇ 150 ಎಂಎಲ್‌ಗೆ 125 ರೂ. ಆರಂಭಿಕ ಕೊಡುಗೆಯಾಗಿ 150 ಎಂಎಲ್‌ನ ಬಾಟಲಿಗೆ ಶೇ. 33 ರಷ್ಟು ರಿಯಾಯಿತಿ ಸೌಲಭ್ಯ ನೀಡಲಾಗಿದೆ.

ರೆವ್ಲಾನ್ ಕಲರ್ ಸಿಲ್ಕ್



ರೆವ್ಲಾನ್ ಇಂಕ್ ಯುಎಸ್‌ಎ ತನ್ನ ಭಾರತೀಯ ಪಾಲುದಾರರಾದ ಮೋದಿ- ರೆವ್ಲಾನ್ ಪ್ರೈವೇಟ್ ಲಿಮಿಟೆಡ್ ಮೂಲಕ ಅಮೋನಿಯಾ ಮುಕ್ತವಾದ ಕೇಶವರ್ಣ- ರೆವ್ಲಾನ್ ಕಲರ್ ಸಿಲ್ಕ್‌ನ್ನು ಮಾರುಕಟ್ಟೆಗೆ ತಂದಿದೆ.

ಈ ಕಲರ್ ಸಿಲ್ಕ್ ಜಾಗತಿಕವಾಗಿ ಅಮೋನಿಯಾದಿಂದ ಮುಕ್ತವಾದಂತಹ ಮೊಟ್ಟಮೊದಲ ಕಾಯಂ ಕೇಶವರ್ಣವಾಗಿದೆ.

ಹೇನುನಿವಾರಕ ಚಿಕಿತ್ಸೆ



ಮೆರಿಕೋ ಇಂಡಸ್ಟ್ರೀಸ್ ಇದೀಗ ತಲೆಗೂದಲ ಹೇನು ನಿವಾರಣೆಗಾಗಿ ಮೆಡಿಕೆರ್ ಎಂಬ ವಿನೂತನ ಔಷಧಿಯನ್ನು ಹೊರತಂದಿದೆ. ಇದೊಂದು ಸ್ವಾಭಾವಿಕ ಹೇನುನಿವಾರಕ ಔಷಧಿಯಾಗಿದ್ದು ಬೇವು, ಕರ್ಪೂರ ಹಾಗೂ ತೆಂಗಿನೆಣ್ಣೆ ಅಂಶಗಳನ್ನು ಒಳಗೊಂಡಿದೆ.

ಹೊಸ ಮೆಡಿಕೇರ್ ಹೇನು ನಿವಾರಕ ದ್ರವವು ಶೀಷೆ/ಸಿ ಪ್ಯಾಕ್‌ನಲ್ಲಿ ಎಲ್ಲೆಡೆ ಲಭ್ಯವಿದ್ದು, 50 ಎಂಎಲ್ ಪ್ಯಾಕ್ ಬೆಲೆ 32.62 ರೂ. 10 ಎಂಎಲ್ ಸಾಶೆ ಬೆಲೆ ಕೇವಲ 7 ರೂ.

ಹೇನ್ಸ್ ಉಡುಪು



ಸಾರಾಲೀ ಕಾರ್ಪೋರೇಷನ್‌ನ ಶೇ 100ರಷ್ಟು ಅಂಗ ಸಂಸ್ಥೆಯಾದ ಸಾರಾಲೀ ಅಪರೆಲ್ ಇಂಡಿಯಾ ಪ್ರೈವೇಟ್ ಇಂಡಿಯಾ ಅಮೆರಿಕಾದ ನೆಚ್ಚಿನ ಉಡುಪುಗಳ ಬ್ರ್ಯಾಂಡ್ ಆದ ಹೇನ್ಸ್‌ನ್ನು ಭಾರತದಲ್ಲಿ ಬಿಡುಗಡೆ ಮಾಡಿದೆ. ಈ ಸಂಗ್ರಹದಲ್ಲಿ ಪುರುಷರ ಒಳ ಉಡುಪುಗಳಾದ ಬ್ರೀಫ್‌ಗಳು, ಬಾಕ್ಸರ್‌ಗಳು ಮುಂತಾದವುಗಳಲ್ಲದೆ ಕ್ರ್ಯೂನೆಕ್ ಶರ್ಟ್‌ಗಳನ್ನು ಸಹ ಸಾದರಪಡಿಸಲಾಗುತ್ತಿದೆ. ಉಡುಪುಗಳ ದರ ರೂ 60ಗಳಿಂದ ರೂ 250 ಗಳವರೆಗೆ ಇರುತ್ತದೆ.

ರೆನಾಲ್ಡ್ಸ್ ಟ್ರೈಮಾಕ್ಸ್




ರೆನಾಲ್ಡ್ಸ್‌ನ ಮಾರಾಟ ಸಂಸ್ಥೆ ಜಿಎಂ ಇಂಟರ್ ನ್ಯಾಷನಲ್ ಪ್ರೈ. ಲಿ., ಇದೀಗ ರೆನಾಲ್ಡ್ಸ್ ಟ್ರೈಮಾಕ್ಸ್ ಫ್ಲುಯಿಡ್ ಇಂಕ್ ಸಿಸ್ಟಮ್ ಪೆನ್‌ಗಳನ್ನು ಬಿಡುಗಡೆ ಮಾಡಿದೆ. ಮಾಮೂಲಿ ಪೆನ್ನಿಗಿಂತ ಮೂರು ಪಟ್ಟು ಹೆಚ್ಚು ಸಮಯ ಬರೆಯಬಹುದು. ಇದರ ಬೆಲೆ ರೂ. 30: ರೀಫಿಲ್ ಬೆಲೆ ರೂ. 15. ವಿವರಗಳಿಗೆ 080-3360878/ 346197898861-04500ನ್ನು ಸಂಪರ್ಕಿಸಿ.

ಕೈಟೆಕ್ ಪೈಪ್‌ಗಳು



ಕುಡಿಯುವ ನೀರು ಹಾಗೂ ಇತರೆ ಆರೋಗ್ಯದ ಬಳಕೆಗಾಗಿ ಕೈಟೆಕ್ ಕಂಪನಿ ಸೂಕ್ತ ಪೈಪ್‌ಗಳನ್ನು ರೂಪಿಸಿದೆ. ದೂಳು, ತುಕ್ಕು ಹಿಡಿಯದ, ಹೆಚ್ಚು ಬಿಸಿ ತಾಳಬಲ್ಲ ಈ ಪೈಪ್‌ಗಳು ಮೃದುವಾಗಿವೆ. ಬಿಸಿ ಹಾಗೂ ತಣ್ಣಗಿನ ನೀರು ಪೂರೈಕೆ ಸಾಧ್ಯ. ಅನಿಲ, ಸಾಂದ್ರೀಕೃತ ವಾಯು ಸಾಗಿಸಲು ಬಳಸಬಹುದು. ವಿವರಗಳಿಗೆ- 080- 22239891/22221405

ಆ್ಯಕ್ಷನ್ ಚಪ್ಪಲಿ



ಶೂ ಉದ್ಯಮದಲ್ಲಿ ಹೆಸರಾಗಿರುವ ಆ್ಯಕ್ಷನ್ ಸಂಸ್ಥೆ ಮಳೆಗಾಲಕ್ಕೆ ಹೊಸ ಬಗೆ ಚಪ್ಪಲಿಗಳನ್ನು ಹೊರತಂದಿದೆ. ಅತ್ಯಂತ ಹಗುರಾಗಿರುವ ವಿವಿಧ ಬಣ್ಣಗಳಲ್ಲಿ ಲಭ್ಯ. ಇವು ರೂ. 99ರಿಂದ 125ರವರೆಗಿನ ಬೆಲೆಯಲ್ಲಿ ಸಿಗುತ್ತವೆ.

ಕೊಡಗು ಬೆಳೆಗಾರರ ಸಂಘಕ್ಕೆ 125 ವರುಷ!

ಕೊಡಗು ಬೆಳೆಗಾರರ ಸಂಘ ಇದೀಗ 125ನೇ ವರ್ಷಾಚಾರಣೆಯಲ್ಲಿದೆ. ಆದರೆ, ಅದನ್ನು ಸಂಭ್ರಮದಿಂದ ಆಚರಿಸುವ 'ಸ್ಥಿತಿ'ಯಲ್ಲಿ ಮಾತ್ರ ಕಾಫಿ ಉದ್ಯಮ ಈಗ ಇಲ್ಲ...

ಕರ್ನಾಟಕದ ಅತ್ಯಂತ ಹಿರಿಯ ಬೆಳೆಗಾರರ ಸಂಘ ಇದೀಗ ತನ್ನ 125ನೇ ವರುಷವನ್ನು ಸದ್ದುಗದ್ದಲ ಇಲ್ಲದೆ ಆಚರಿಸಿಕೊಳ್ಳುತ್ತಿದೆ. ಮಲೆನಾಡಿನ ಮೌನದಂತೆಯೇ ತನ್ನ 125ನೇ ವರುಷವನ್ನು ಕೊಡಗು ಬೆಳೆಗಾರರ ಸಂಘ ಸರಳವಾಗಿ ಆಚರಿಸುತ್ತಿದೆ.

ಮಡಿಕೇರಿಯಲ್ಲಿ 1879ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಘಕ್ಕೆ ಆರಂಭದಲ್ಲಿ 12 ಸದಸ್ಯರಿದ್ದರೆ, ಈಗ ಜಿಲ್ಲೆಯಾದ್ಯಂತ 664 ಸದಸ್ಯರು ಇದ್ದಾರೆ. ಕಾಫಿ ಉದ್ಯಮದ ಜೊತೆಗೆ ಕಾಫಿ, ರಬ್ಬರ್, ಟೀ ಬೆಳೆಗಾರರು, ಕಾರ್ಮಿಕರ ಸಂಕಷ್ಟಕ್ಕೆ ಕೊಡಗು ಬೆಳೆಗಾರರ ಸಂಘ ಕಾಲದಿಂದ ಕಾಲಕ್ಕೆ ಸ್ಪಂದಿಸುತ್ತಾ ಬಂದಿದೆ. ಬ್ರಿಟಿಷರು ಆರಂಭಿಸಿದ ಈ ಸಂಘ ಕಾಲಕ್ರಮೇಣ ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟ ಮತ್ತು ಕಾಫಿ ಮಂಡಲಿಯ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿತ್ತು.

1834ರಿಂದ 1948ರವರೆಗೆ ಕೊಡಗಿನಲ್ಲಿ ಇದ್ದ ಬ್ರಿಟಿಷ್ ಅಧಿಕಾರಿಗಳಲ್ಲಿ ಹಲವರು ಈ ಗಿರಿಧಾಮ ನಗರಿಯನ್ನು ವಿರಾಮಗೋಸ್ಕರ, ಮೋಜಿಗೋಸ್ಕರ ಬಳಸಿಕೊಂಡರು. ಆದರೆ, ಕೆಲವೇ ಕೆಲವು ಆಂಗ್ಲ ಅಧಿಕಾರಿಗಳು ಇಲ್ಲಿನ ಮಣ್ಣಿನಲ್ಲಿ ಸ್ಥಳೀಯರಂತೆ ಕಾಫಿ ಕೃಷಿಗೆ ಮುಂದಾಗಿ ಯಶಸ್ಸು ಕಂಡರು. 1870 ರಲ್ಲಿ ಅಂದಿನ ಅಧಿಕಾರಿ ರೆವರೆಂಡ್ ಜಿ. ರಿಚ್ಚರ್ ದಾಖಲಿಸಿರುವಂತೆ, 'ಈ ನಾಡಿನ ಫಲವತ್ತಾದ ಮಣ್ಣಿನಲ್ಲಿ ಅತ್ಯುತ್ತಮ ಗುಣಮಟ್ಟದ ಕಾಫಿ ಬೆಳೆಯುವುದು ಸಾಧ್ಯವಿದ್ದರೂ, ಯುರೋಪಿಯನ್ನರು ಪೂರ್ಣ ಪ್ರಮಾಣದಲ್ಲಿ ಕಾಫಿ ಕೃಷಿಗೆ ಮುಂದಾಗಿರುವುದು ಅಚ್ಚರಿಯೇ ಸರಿ.

'ಆರಂಭದಲ್ಲಿ ಕೆಲವೇ ಕೆಲವು ಬ್ರಿಟಿಷ್ ಮೂಲದ ಕಾಫಿ ಬೆಳೆಗಾರರು ಸೇರಿ ಸಮಯ ಕಳೆಯಲೆಂದು ಸಂಘ ಆರಂಭಿಸಿರಬಹುದಾದರೂ, ಅದಕ್ಕೊಂದು ಸಂಘದ ಕಾರ್ಯ ವಿಧಾನದ ನಿರ್ದಿಷ್ಟ ರೂಪು ಬಂದದ್ದು 1879ರಲ್ಲಿ. ರೆವರೆಂಡ್ ಎ. ಫೆನ್ನಲ್ ಕೊಡಗು ಬೆಳೆಗಾರರ ಸಂಘದ ಮೊದಲ ಅಧ್ಯಕ್ಷರಾದರೆ ಜೆ.ಆರ್. ಇವನ್ಸ್ ಸಂಘದ ಪ್ರಥಮ ಗೌರವ ಕಾರ್ಯದರ್ಶಿ ಎನಿಸಿದರು. ಆರಂಭದ ಹಲವು ವರುಷ ಸ್ಥಳೀಯ ಭಾರತೀಯ ಮೂಲದ ಬೆಳೆಗಾರರಿಗೆ ಸಂಘದಲ್ಲಿ ಪ್ರವೇಶವೇ ಇರಲಿಲ್ಲ! ಎಲ್ಲವೂ 'ಬ್ರಿಟಿಷ್' ಮಯವಾಗಿತ್ತು.

ಅನಂತರದ ದಿನಗಳಲ್ಲಿ ಭಾರತೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಆಂಗ್ಲ ದೊರೆಗಳು ಸಂಘದ ಕಚೇರಿಯೊಳಗೆ ಬರಮಾಡಿಕೊಂಡರು. ಸ್ವಾತಂತ್ರ್ಯ ದೊರೆತ ಬಳಿಕ ತೋಟಗಳನ್ನು ಮಾರಾಟ ಮಾಡಿ ತಮ್ಮ ನೆಲೆಗಳಿಗೆ ಇಂಗ್ಲಿಷರು ವಾಪಾಸಾದ ನಂತರವೇ ಸ್ಥಳೀಯ ಬೆಳೆಗಾರರಿಗೆ ಸಂಘದ ಸಂಪೂರ್ಣ ಹಿಡಿತ ದೊರೆಯಿತು. 1940 ರಲ್ಲಷ್ಟೇ ಸಂಘದ ಮೊದಲ ಭಾರತೀಯ ಅಧ್ಯಕ್ಷರಾಗಿ ದಿವಾನ್ ಬಹದ್ದೂರ್ ಚೆಂಗಪ್ಪ ಆಯ್ಕೆ ಆದರು.



ಸಂಘದ ಅಧ್ಯಕ್ಷ ಕೆ.ಎಂ. ನಾಣಯ್ಯ

ಕೊಡಗು ಬೆಳೆಗಾರರ ಸಂಘ ಆರಂಭವಾದ ಸಂದರ್ಭದಲ್ಲಿ ಬೇಡಿಕೆಗಳಲ್ಲಿ ಮುಖ್ಯವಾದವುಗಳೆಂದರೆ, ಅಂದಿನ ಆಂಗ್ಲ ಅಧಿಕಾರಿಗಳು ಕೊಡಗು ಪ್ರಾಂತದ ಬಾಣೆ ಭೂಮಿಯಲ್ಲಿ ಕಾಫಿ ಬೆಳೆಯದಂತೆ ನಿರ್ಬಂಧ ಹೇರಿದ್ದರು. ಈ ಆದೇಶವನ್ನು ಪುನರ್ ಪರಿಶೀಲಿಸುವಂತೆ 1881ರ ನವೆಂಬರ್‌ನಲ್ಲಿ ಅಂದಿನ ಬ್ರಿಟಿಷ್ ಮುಖ್ಯ ಕಮೀಷನರ್‌ಗೆ ಮನವಿ ಸಲ್ಲಿಸಲಾಗಿತ್ತು. ಸಿದ್ದಾಪುರದಲ್ಲಿನ ಕಾವೇರಿ ನದಿಗೆ ಅಡ್ಡವಾಗಿ ಸುಭದ್ರ ಸೇತುವೆ ನಿರ್ಮಿಸುವಂತೆಯೂ ಕೋರಲಾಗಿತ್ತು.

ಮೈಸೂರಿನಿಂದ ಕೊಡಗಿಗೆ ರೈಲು ಸಂಪರ್ಕ ಕಲ್ಪಿಸುವ ಬೇಡಿಕೆ ಮೊದಲ ಬಾರಿಗೆ 1881ರಲ್ಲಿಯೇ ಕೇಳಿಬಂದಿತು. ಅಂದಿನ 'ಮರ್ಕೆರಾ'ಕ್ಕೆ (ಮಡಿಕೇರಿ) ಮೈಸೂರಿನಿಂದ ಪ್ರತಿದಿನ ಕುದುರೆ ಗಾಡಿಯಲ್ಲಿ ಟಪಾಲು ತರುವ ವ್ಯವಸ್ಥೆ ಜಾರಿಗೂ ಮನವಿ ಸಲ್ಲಿಸಲಾಗಿತ್ತು.

1882ರಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆಕಲಿಲ್ಲ ಎಂಬ ಕಾರಣದಿಂದ ದಕ್ಷಿಣ ಕೊಡಗಿನ ಕೆಲವು ಬೆಳೆಗಾರರು ತಾವೇ ಬೇರೊಂದು ಸಂಘ ರೂಪಿಸಲು ಮುಂದಾದರು. ಈ ಭಾಗದವರು ಉತ್ತರ ಭಾಗದ ಬೆಳೆಗಾರರು ಎಂದು ಗುರುತಿಸಿ ಬಿಟ್ಟರು. ಆದರೆ, ಆಂಗ್ಲರೂ ಸೇರಿದಂತೆ ಅನೇಕ ಹಿರಿಯ ಬೆಳೆಗಾರರು, ಈ ರೀತಿ ಬೆಳೆಗಾರರು ಸಂಘ ವಿಭಜಿಸಿದರೆ, ಮತ್ತಷ್ಟು ಸಮಸ್ಯೆ ಸೃಷ್ಟಿ ಆಗಬಲ್ಲದು.

ಬೆಳೆಗಾರರ ಒಗ್ಗಟ್ಟನ್ನು ಪ್ರತಿಪಾದಿಸಲು, ಸಮಸ್ಯೆ ನಿವಾರಿಸಲು ಒಂದೇ ಸಂಘದ ಅಗತ್ಯ ಮನವರಿಕೆ ಮಾಡಿದ ನಂತರವೇ ಮತ್ತೆ ಎಲ್ಲ ಬೆಳೆಗಾರರು ಕೊಡಗು ಬೆಳೆಗಾರರ ಸಂಘಕ್ಕೆ ತಮ್ಮ ನಿಷ್ಠೆ ತೋರಿದರು.

ಕಾಫಿ ಸಂಸ್ಕರಣೆಯ ನಂತರದ ಕೊಳೆಯನ್ನು ನದಿಗೆ ಬಿಡುವುದರಿಂದ ಪರಿಸರ, ನದಿ ನೀರಿನ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ 1886ರಲ್ಲಿಯೇ ಬೆಳೆಗಾರರ ಮನ ಒಲಿಸುವಲ್ಲಿ ಈ ಸಂಘ ಸಫಲವಾಗಿತ್ತು.

1891ರಲ್ಲಿ ಹ್ಯಾಮಿಲ್ಟನ್ ಎಂಬ ಮದ್ರಾಸ್‌ನ ಪ್ರಮುಖ ಬೆಳೆಗಾರನ ಮೇಲೆ 1892ರಲ್ಲಿ ಒತ್ತಡ ಹೇರಿ ದಕ್ಷಿಣ ಭಾರತ ಬೆಳೆಗಾರರ ಒಕ್ಕೂಟ (ಉಪಾಸಿ) ಆರಂಭಿಸುವಂತೆ ಮಾಡುವಲ್ಲಿಯೂ ಕೊಡಗು ಬೆಳೆಗಾರರ ಸಂಘದ್ದು ಮಹತ್ವದ ಪಾತ್ರ. ಇಂದಿಗೂ 'ಉಪಾಸಿ' ದೇಶದ ಪ್ರಮುಖ ಬೆಳೆಗಾರ ಸಂಘಟನೆಯಾಗಿ ಬೆಳೆದುಬಂದಿದೆ.

1930ರಲ್ಲಿ ಕಾಫಿ ಕೃಷಿ ತೀವ್ರ ಸಂಕಷ್ಟ ಎದುರಿಸುವ ಸಂದರ್ಭದಲ್ಲಿ ಸರ್ಕಾರದ ಗಮನವನ್ನು ಸೆಳೆದು 'ಕಾಫಿ ಮಂಡಲಿ' ಮೂಲಕ ಕಾಫಿ ಬೆಳೆಗೆ ಪ್ರತ್ಯೇಕ ಮಂಡಲಿ ರಚಿಸುವಲ್ಲಿ ಕೊಡಗು ಬೆಳೆಗಾರರ ಸಂಘ ಯಶಸ್ವಿ ಆಯಿತು.

